	HOSPITAL ATTENDENT GRADE II	1	0	1
	HOSPITAL ATTENDENT GRADE II	1	0	1
	JUNIOR HEALTH ASSISTANT FEMALE	1	1	0
	JUNIOR HEALTH ASSISTANT FEMALE	1	1	0
	JUNIOR HEALTH ASSISTANT FEMALE	1	0	1
	JUNIOR HEALTH ASSISTANT MALE	1	0	1
	JUNIOR MEDICAL LABAROTORY TECHNOLOGIST	1	0	1
	PHARMACIST	1	1	0
	SECOND DIVISION ASSISTANT	1	0	1
	SENIOR HEALTH ASSISTANT MALE	1	0	1
	STAFF NURSE	1	0	1
	ಒಟ್ಟು	8	3	5
31	Health Office,Hamsandra			
	BLOCK HEALTH EDUCATION OFFICER	1	0	1
	GENERAL DUTY MEDICAL OFFICER	1	1	0
	HOSPITAL ATTENDENT GRADE II	1	0	1
	HOSPITAL ATTENDENT GRADE II	1	0	1
	JUNIOR HEALTH ASSISTANT FEMALE	1	0	1
	JUNIOR HEALTH ASSISTANT FEMALE	1	0	1
	JUNIOR HEALTH ASSISTANT FEMALE	1	0	1
	JUNIOR HEALTH ASSISTANT MALE	1	1	0
	JUNIOR MEDICAL LABAROTORY TECHNOLOGIST	1	1	0
	PHARMACIST	1	0	1
	SECOND DIVISION ASSISTANT	1	1	0
	SENIOR HEALTH ASSISTANT MALE	1	0	1
	STAFF NURSE	1	0	1
	ಒಟ್ಟು	13	4	9
32	Health Office,Hamsandra			
	GENERAL DUTY MEDICAL OFFICER	1	1	0
	HOSPITAL ATTENDENT GRADE II	1	0	1
	HOSPITAL ATTENDENT GRADE II	1	0	1
	JUNIOR HEALTH ASSISTANT FEMALE	1	0	1
	JUNIOR HEALTH ASSISTANT FEMALE	1	0	1
	JUNIOR HEALTH ASSISTANT MALE	1	1	0
	JUNIOR MEDICAL LABAROTORY TECHNOLOGIST	1	0	1

	PHARMACIST	1	1	0
	SECOND DIVISION ASSISTANT	1	0	1
	SENIOR HEALTH ASSISTANT FEMALE	1	0	1
	STAFF NURSE	1	1	0
	TOTAL	**11**	**4**	**7**
33	ತೋಟಗಾರಿಕೆ ಇಲಾಖೆ			
	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	1	1	0
	ಸಹಾಯಕ ತೋಟಗಾರಿಕೆ ನಿರ್ದೇಶಕರು	1	1	0
	ಸಹಾಯಕ ತೋಟಗಾರಿಕೆ ಅಧಿಕಾರಿಗಳು	2	1	1
	ತೋಟಗಾರಿಕೆ ಸಹಾಯಕರು	3	0	3
	ದ್ವಿತೀಯ ದರ್ಜೆ ಸಹಾಯಕರು	1	1	0
	ತೋಟಗಾರರು	5	0	5
	ಒಟ್ಟು	13	4	9
34	ಆರಕ್ಷಕ ಇಲಾಖೆ			
	POLICE INSPECTOR	1	1	0
	POLICE SUB INSPECTOR	2	1	1
	ASSITANT SUB INSPECTOR	4	4	0
	HEAD CONISTABLE	10	10	0
	CIVIL POLICE CONISTABLE	15	15	0
	ಒಟ್ಟು	32	31	1
35	ಉಪನೋಂದಣಾಧಿಕಾರಿಗಳ ಕಚೇರಿ			
	ಉಪನೋಂದಣಾಧಿಕಾರಿ	1	0	1
	ದ್ವಿ.ದ.ಸ	1	1	0
	ಡಿ ದರ್ಜೆ ನೌಕರರು	1	1	0
	ಒಟ್ಟು	3	2	1
36	ರೇಷ್ಮೆ ಇಲಾಖೆ, ಗುಡಿಬಂಡೆ			
	ರೇಷ್ಮೆ ವಿಸ್ತರಣಾಧಿಕಾರಿಗಳು	1	0	1
	ರೇಷ್ಮೆ ನಿರೀಕ್ಷಕರು	1	1	0
	ರೇಷ್ಮೆ ಪ್ರದರ್ಶಕರು	2	0	2
	ವಾಹನ ಚಾಲಕರು	1	0	1
	ಡಿ ದರ್ಜೆ ನೌಕರರು	1	0	1
	ಒಟ್ಟು ಮಂಜೂರಾದ ಹುದ್ದೆಗಳು	6	1	5
37	ಪಟ್ಟಣ ಪಂಚಾಯಿತಿ			
	ಮುಖ್ಯಾಧಿಕಾರಿ ದರ್ಜೆ-2	1	1	0
	ಕಿರಿಯ ಅಭಿಯಂತರರು	1	0	1

	ಪ್ರ.ದ.ಸ	1	1	0
	ಸಮುದಾಯ ಸಂಘಟನಾ ಅಧಿಕಾರಿ	1	0	1
	ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು	1	1	0
	ನೀರು ಸರಬರಾಜು ಸಹಾಯಕ	1	0	1
	ಡಾಟಾ ಎಂಟ್ರಿ ಆಪರೇಟರ್	1	0	1
	ಕಿರಿಯ ಆರೋಗ್ಯ ನಿರೀಕ್ಷಕರು	1	1	0
	ಸಮುದಾಯ ಸಂಘಟಕರು	1	0	1
	ದ್ವಿ.ದ.ಸ	3	2	1
	ಕರವಸೂಲಿಗಾರರು	1	1	0
	ವಾಹನಚಾಲಕರು	1	0	1
	ಸಹಾಯಕರ ನೀರು ಸರಬರಾಜು ಸಹಾಯಕರು	1	0	1
	ಸ್ಯಾನಿಟರಿ ಸೂಪರ್ ವೈಸರ್	1	0	1
	ಸೀನಿಯರ್ ವಾಲ್ ಮನ್	1	0	1
	ಪೌರಕಾರ್ಮಿಕರು	15	6	9
	ಅಟೆಂಡರ್	1	1	0
	ಲೋಡರ್	4	1	3
	ವಾಟರ್ ಸಪ್ಲೈ ವಾಲ್ ಮನ್	3	0	3
	ಒಟ್ಟು	40	15	25
38	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ			
	ತಾಲ್ಲೂಕು ಕಲ್ಯಾಣಾಧಿಕಾರಿಗಳು	1	0	1
	ತಾಲ್ಲೂಕು ವಿಸ್ತರಣಾಧಿಕಾರಿಗಳು	1	1	0
	ಪ್ರಥಮ ದರ್ಜೆ ಸಹಾಯಕರು	1	1	0
	ದ್ವಿತೀಯ ದರ್ಜೆ ಸಹಾಯಕರು	1	0	1
	ಡಾಟಾ ಎಂಟ್ರಿ ಆಪರೇಟರ್	1	0	1
	ಡಿ-ಗ್ರೂಪ್	1	0	1
	ನಿಲಯ ಮೇಲ್ವಿಚಾರಕರು	4	1	3
	ಅಡುಗೆಯವರು	10	4	6
	ಅಡುಗೆ ಸಹಾಯಕರು	6	2	4
	ರಾತ್ರಿ ಕಾವಲುಗಾರರು	2	0	2
	ಒಟ್ಟು	28	9	19
	ಜುಮ್ಲಾ	**937**	**525**	**412**

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 113
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್
3. ಉತ್ತರಿಸಬೇಕಾದ ದಿನಾಂಕ : 20.12.2022
4. ಉತ್ತರಿಸುವ ಸಚಿವರು : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಬಾಗೇಪಲ್ಲಿ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ಎಷ್ಟು ಕೆರೆಗಳಿಗೆ ಹಾನಿಯಾಗಿರುತ್ತದೆ;	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಕ್ಷೇತ್ರದಲ್ಲಿ ಒಟ್ಟು 42 ಸಣ್ಣ ನೀರಾವರಿ ಕೆರೆಗಳು ಇರುತ್ತವೆ. ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಸುಮಾರು 22 ಸಣ್ಣ ನೀರಾವರಿ ಕೆರೆಗಳಿಗೆ ಹಾನಿಯಾಗಿರುತ್ತದೆ.
ಆ.	ಈ ಕೆರೆಗಳನ್ನು ದುರಸ್ಥಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಕೆರೆಗಳ ದುರಸ್ಥಿ ಹಾಗೂ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 19 ಕಾಮಗಾರಿಗಳು ಪ್ರಗತಿಯಲ್ಲಿದ್ದು 3 ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: ಎಂಐಡಿ 356 ಎಲ್‌ಎಕ್ಯೂ 2022

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ) ಇವರ ಪ್ರಶ್ನೆ ಸಂಖ್ಯೆ: 113 ಕ್ಕೆ ಅನುಬಂಧ

ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಭಾರಿ ಮಳೆಯಿಂದ ಹಾನಿಯಾಗಿರುವ ಕೆರೆಗಳ ವಿವರ

ಕ್ರ.ಸಂ.	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಲೆಕ್ಕಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಒಟ್ಟು ವೆಚ್ಚ	ಕಾಮಗಾರಿಯ ಹಂತ
1	2	3	4	5	6	7	8
1	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲುಕು ಚಿನ್ನಗಾನಪಲ್ಲಿ ಯರ್ರಗುಡಿ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆ ತಡೆಯುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
2 ಎ	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಪರಗೋಡು ಕೆರೆಯ ತೂಬಿನಲ್ಲಿ, ಕೋಡಿಯಲ್ಲಿ ಮತ್ತು ಮಣ್ಣಿನ ಏರಿಯಲ್ಲಿ ನೀರು ಸೋರುವಿಕೆ ತಡೆಯುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
2 ಬಿ	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಪರಗೋಡು ಕೆರೆಯ ಕೋಡಿಗಳು ಮತ್ತು ಏರಿ ದುರಸ್ಥಿ ಕಾಮಗಾರಿ	27.00	0.00	ಪ್ರಗತಿಯಲ್ಲಿದೆ.
3	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಕಾರಕೂರು ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆ ತಡೆಯುವ ಮತ್ತು ಮಣ್ಣಿನ ಏರಿ ದುರಸ್ಥಿ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
4	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಪುಟ್ಟಪರ್ತಿ ನಿಮ್ಮಲಪಲ್ಲಿ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆ ತಡೆಯುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
5	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಯಲ್ಲಂಪಲ್ಲಿ ಸಂಜೀವಮ್ಮನ ಕೆರೆಯ ತೂಬುಗಳಲ್ಲಿ ಮತ್ತು ಕೋಡಿಗಳಲ್ಲಿ ನೀರು ಸೋರುವಿಕೆ ತಡೆಯುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
6	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಯಲ್ಲಂಪಲ್ಲಿ ಊರಮುಂದಿನ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆ ತಡೆಯುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
7	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಗೂಳೂರು ದೊಡ್ಡ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆ ತಡೆಯುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
8	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಮಲ್ಲಸಂದ್ರ ರಾಜವರಿ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆ ತಡೆಯುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.

ಕ್ರ.ಸಂ.	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಲೆಕ್ಕಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಒಟ್ಟು ವೆಚ್ಚ	ಕಾಮಗಾರಿಯ ಹಂತ
1	2	3	4	5	6	7	8
9	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆ ತಾಲ್ಲೂಕು ಗಂಗಾನಹಳ್ಳಿ ಕೆರೆಯ ಏರಿ ಮತ್ತು ಕೋಡಿ ಕಾಲುವೆಯ ಮಳೆಹಾನಿ ದುರಸ್ಥಿ ಕಾಮಗಾರಿ.	4.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
10	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆ ತಾಲ್ಲೂಕು ಕಂಬಾಲಹಳ್ಳಿ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆ ತಡೆಗಟ್ಟುವ ದುರಸ್ಥಿ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
11	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆ ತಾಲ್ಲೂಕು ಬೀಚಗಾನಹಳ್ಳಿ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆಯನ್ನು ತಡೆಗಟ್ಟುವ ದುರಸ್ಥಿ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
12 ಎ	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆ ತಾಲ್ಲೂಕು ಚೆಂಡೂರು ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆಯನ್ನು ತಡೆಗಟ್ಟುವ ದುರಸ್ಥಿ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
12 ಬಿ	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಚಂಡೂರು ಕೆರೆಯ ತೂಬುಗಳ ಮರು ನಿರ್ಮಾಣ ಹಾಗೂ ಏರಿ ದುರಸ್ಥಿ ಕಾಮಗಾರಿ.	9.00	0.00	ಪ್ರಗತಿಯಲ್ಲಿದೆ
13	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆ ತಾಲ್ಲೂಕು ಕಡೆಹಳ್ಳಿ ಕೆರೆಯ ತೂಬುಗಳಲ್ಲಿ ನೀರು ಸೋರುವಿಕೆಯನ್ನು ತಡೆಗಟ್ಟುವ ಕಾಮಗಾರಿ.	3.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
14	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ರಾಶ್ಚೆರವು ದೊಡ್ಡ ಕೆರೆಯ ಕೋಡಿಗಳು ಮತ್ತು ಏರಿ ದುರಸ್ಥಿ ಕಾಮಗಾರಿ.	30.00	0.00	ಪ್ರಗತಿಯಲ್ಲಿದೆ
15	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ವೆಂಕಟಾಪುರ ದೊಡ್ಡ ಕೆರೆಯ ಏರಿ ಮತ್ತು ಕೋಡಿಗಳು ದುರಸ್ಥಿ ಕಾಮಗಾರಿ.	28.00	0.00	ಪ್ರಗತಿಯಲ್ಲಿದೆ.
16	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಬಿಳ್ಳೂರು ಕೆರೆಯ ಕೋಡಿ ಮತ್ತು ಏರಿ ದುರಸ್ಥಿ ಕಾಮಗಾರಿ.	22.00	0.00	ಪ್ರಗತಿಯಲ್ಲಿದೆ.
17	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಜಿ.ಮದ್ದೇಪಲ್ಲಿ ದೊಡ್ಡ ಕೆರೆಯ ಕೋಡಿಗಳು ಮತ್ತು ಏರಿ ದುರಸ್ಥಿ ಕಾಮಗಾರಿ.	18.00	0.00	ಪ್ರಗತಿಯಲ್ಲಿದೆ.
18 ಎ	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಅಮಾನಿ ಭೈರಸಾಗರ ಕೆರೆಯ ಬಲದಂಡೆ ಕಾಲುವೆಯ ಕೊಂಡವಾಲಹಳ್ಳಿ ಬಳಿ ಶೀಥಿಲಗೊಂಡಿರುವ ಗೈಡ್‌ವಾಲ್‌ನ್ನು ಹೊಸದಾಗಿ ನಿರ್ಮಾಣ ಮಾಡುವ ಕಾಮಗಾರಿ.	9.00	0.00	ಪ್ರಗತಿಯಲ್ಲಿದೆ.

ಕ್ರ.ಸಂ.	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಲೆಕ್ಕಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಒಟ್ಟು ವೆಚ್ಚ	ಕಾಮಗಾರಿಯ ಹಂತ
1	2	3	4	5	6	7	8
18 ಬಿ	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಅಮಾನಿ ಬೈರಸಾಗರ ಕೆರೆಯಿಂದ ವಾಟದಹೊಸಹಳ್ಳಿ ಕೆರೆಯ ಗೇಟುಗಳ ದುರಸ್ಥಿ ಕಾಮಗಾರಿ.	13.00	0.00	ಪ್ರಗತಿಯಲ್ಲಿದೆ.
19	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಯಲ್ಲೋಡು ಕೆರಿ ಮತ್ತು ಮೇಳ್ಯಾ ಕೆರೆ ದುರಸ್ಥಿ ಕಾಮಗಾರಿ.	9.00	0.00	ಪ್ರಗತಿಯಲ್ಲಿದೆ.
20	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ನಾರೇಮದ್ದೇಪಲ್ಲಿ ದೊಡ್ಡ ಕೆರೆ ಅಭಿವೃದ್ಧಿ ಕಾಮಗಾರಿ	30.00	0.00	ಅಂದಾಜು ಪಟ್ಟಿ ಅನುಮೋದನೆಯಾಬೇಕಿದೆ
21	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯ ಅಮ್ಮನ ಕೆರೆ ಅಭಿವೃದ್ಧಿ ಕಾಮಗಾರಿ	30.00	0.00	ಅಂದಾಜು ಪಟ್ಟಿ ಅನುಮೋದನೆಯಾಬೇಕಿದೆ
22	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಅಮಾನಿ ಬೈರಸಾಗರ ಕೆರೆ ಅಭಿವೃದ್ಧಿ ಕಾಮಗಾರಿ	40.00	0.00	ಅಂದಾಜು ಪಟ್ಟಿ ಅನುಮೋದನೆಯಾಬೇಕಿದೆ
ಒಟ್ಟು					**305.00**	**0.00**	

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.	16
ಮಾನ್ಯ ಸದಸ್ಯರ ಹೆಸರು	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದವರು	ಅಬಕಾರಿ ಸಚಿವರು
ಉತ್ತರಿಸಬೇಕಾದ ದಿನಾಂಕ	20.12.2022

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕಳ್ಳಭಟ್ಟಿ ಸಾರಾಯಿ ಹಾಗೂ ಅನಧಿಕೃತವಾಗಿ ಮದ್ಯ ಮಾರಾಟ ಮಾಡುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಕಳ್ಳಭಟ್ಟಿ ಹಾಗೂ ಅನಧಿಕೃತ ಮದ್ಯ ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಇಲಾಖೆಯಿಂದ ನಡೆಸಲಾಗುವ ಗ್ರಾಮ ಸಭೆಗಳಲ್ಲಿ ಸಾರ್ವಜನಿಕರಿಗೆ ಕರಪತ್ರ / ಜಾಗೃತಿ ಪತ್ರಗಳನ್ನು ಹಂಚಿ ತಿಳುವಳಿಕೆ ಮೂಡಿಸಲಾಗುತ್ತಿದೆ.
ಆ)	ಇದರಿಂದ ಗ್ರಾಮೀಣ ಪ್ರದೇಶದ ಯುವ ಜನಾಂಗದ ಮೇಲೆ ಗಂಭೀರ ಪರಿಣಾಮವಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ:	
ಇ)	ಹಾಗಾದರೆ, ಈ ಕಳ್ಳಭಟ್ಟಿ ಸಾರಾಯಿ ಹಾಗೂ ಗ್ರಾಮೀಣ ಭಾಗಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟವನ್ನು ತಡೆಗಟ್ಟಲು	ಕಳ್ಳಭಟ್ಟಿ ಹಾಗೂ ಅಕ್ರಮ ಮದ್ಯ ಮಾರಾಟ ತಡೆಯಲು ವಲಯ ವ್ಯಾಪ್ತಿಯ ರೂಟ್‌ಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ಸದರಿ ಗಸ್ತಿನ ಸಮಯದಲ್ಲಿ ದೂರು ಸ್ವೀಕೃತವಾದಲ್ಲಿ ಅಕ್ರಮವಾಗಿ ಮಾರಾಟವಾಗುತ್ತಿರುವ ಸ್ಥಳಗಳ ಮೇಲೆ ದಾಳಿ ನಡೆಸಿ ಅಕ್ರಮಗಳು ಕಂಡು ಬಂದಲ್ಲಿ ಅಬಕಾರಿ ಕಾಯ್ದೆ ಮತ್ತು ನಿಯಮಗಳನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ರಸ್ತೆಗಾವಲು ನಡೆಸಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಹತ್ತಿಕ್ಕಲು ಕ್ರಮ ವಹಿಸುವ ಕುರಿತು ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 50ರಂತೆ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಕುರಿತು ಮಾಹಿತಿ ನೀಡಲು ತಿಳುವಳಿಕೆ ಪತ್ರ ಜಾರಿಗೊಳಿಸಲಾಗಿರುತ್ತದೆ. ಅಕ್ರಮ ಚಟುವಟಿಕೆಯಲ್ಲಿ ತೊಡಗಿರುವವರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 32, 34 ಮತ್ತು 15(ಎ) ರನ್ವಯ ಪ್ರಕರಣ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ನಡೆಸಿದ ದಾಳಿ, ದಾಖಲಿಸಿರುವ ಪ್ರಕರಣಗಳು, ವಶಪಡಿಸಿಕೊಂಡ ವಸ್ತುಗಳ ಹಾಗೂ ವಿಧಿಸಲಾಗಿರುವ ದಂಡದ ವಿವರಗಳು ಕೆಳಕಂಡಂತಿದೆ.

ಅಬಕಾರಿ ಸಾಲು	ದಾಳಿ	ದಾಖಲಿಸಿದ ಪ್ರಕರಣಗಳು			ವಶಪಡಿಸಿಕೊಂಡ ವಸ್ತುಗಳು				ವಿಧಿಸಲಾದ ದಂಡ (ಕೋಟಿ ರೂ.ಗಳಲ್ಲಿ)
		ಕಲಂ 32,34 (ಜಾಮೀನೀಯವಲ್ಲದ)	ಕಲಂ 15 (ಎ) (ಜಾಮೀನೀಯ)	ಒಟ್ಟು	ಮದ್ಯ (ಲೀ.ಗಳಲ್ಲಿ)	ಬಿಯರ್ (ಲೀ.ಗಳಲ್ಲಿ)	ಕಳ್ಳ ಭಟ್ಟಿ (ಲೀ.ಗಳಲ್ಲಿ)	ವಾಹನ	
2020-21	73906	3480	22299	25779	366025	86324	6974	1739	3.83
2021-22	79358	2927	26936	29863	217433	39902	5969	1032	4.86
2022 ಅಕ್ಟೋಬರ್ ಮಾಹೆಯ ಅಂತ್ಯದವರೆಗೆ	25890	1257	9102	10359	85382	119613	3183	459	1.77
ಒಟ್ಟು	**179154**	**7664**	**58337**	**66001**	**668840**	**245839**	**16126**	**3230**	**10.46**

ಆಇ 97 ಇಎಲ್‌ಕ್ಯೂ 2022

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 17
2. ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
3. ಉತ್ತರಿಸಬೇಕಾದ ದಿನಾಂಕ : 20.12.2022
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡ ಏತ ನೀರಾವರಿ ಯೋಜನೆಯಡಿ ನಿರ್ಮಿಸಿರುವ ಕಾಲುವೆಗಳ ಮಧ್ಯದಿಂದ ರೈತರು ತಮ್ಮ ತಮ್ಮ ಹೊಲಗಳಿಗೆ ಸಾಗಲು ಸಿ.ಟಿ.ಸಿ ಇಲ್ಲದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮುರುಗೋಡು ಏತ ನೀರಾವರಿ ಯೋಜನೆಯಡಿ ಸಿ.ಟಿ.ಸಿ ನಿರ್ಮಾಣ ಕಾಮಗಾರಿಗೆ ರೂ.1210.00 ಲಕ್ಷಗಳ ಅನುದಾನ ಒದಗಿಸಲು ಬೈಲಹೊಂಗಲ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಕೋರಿದ್ದು, ಸದರಿ ಪ್ರಸ್ತಾವನೆಯನ್ನು ಅನುದಾನದ ಲಭ್ಯತೆಯನುಸಾರ ಕೈಗೆತ್ತಿಕೊಳ್ಳುವ ಕುರಿತು ಪರಿಶೀಲಿಸಲಾಗುವುದು.
ಆ)	ಈಗಾಗಲೇ ಕಾಲುವೆಗಳಿಗೆ ಸಿ.ಟಿ.ಸಿ ನಿರ್ಮಿಸಲು ಅನುದಾನವನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;	
ಇ)	ಹಾಗಾದರೆ, ಸದರಿ ಪ್ರಸ್ತಾವನೆಗೆ ಅನುಮೋದನೆಯೊಂದಿಗೆ ಅನುದಾನ ನೀಡಿ ಸಿ.ಟಿ.ಸಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೇ?	

ಸಂಖ್ಯೆ: ಜಸಂಇ 93 ಡಬ್ಲ್ಯೂಎಲ್ಎ 2022

(ಗೋವಿಂದ ಎಂ ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 18
2. ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
3. ಉತ್ತರಿಸಬೇಕಾದ ದಿನಾಂಕ : 20.12.2022
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಚಡಿ ಏತ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಪ್ರಸ್ತುತ ಈ ಯೋಜನೆ ಯಾವ ಹಂತದಲ್ಲಿರುತ್ತದೆ;	ಬೆಳಗಾವಿ ಜಿಲ್ಲೆಯ ಗೋಕಾಕ, ಸವದತ್ತಿ ಹಾಗೂ ಬೈಲಹೊಂಗಲ ತಾಲ್ಲೂಕಿನ ಒಟ್ಟು 12 ಗ್ರಾಮಗಳ 2718 ಹೇ. (6716.18 ಎಕರೆ) ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಚಚಡಿ ಏತ ನೀರಾವರಿ ಯೋಜನೆಗೆ ದಿನಾಂಕ: 04.02.2007 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಚಚಡಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ದಿನಾಂಕ:20.07.2015 ರಿಂದ ಪ್ರಾರಂಭಿಸಲಾಗಿರುತ್ತದೆ. ಅರಣ್ಯ ಪ್ರದೇಶದಲ್ಲಿ ಬರುವ ಕಿ.ಮೀ.0.00 ರಿಂದ 3.00 ಕಿ.ಮೀ.ವರೆಗಿನ ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಅರಣ್ಯ ಪ್ರದೇಶದಲ್ಲಿ ಬರುವ ಕಿ.ಮೀ.0.00 ರಿಂದ 3.00 ಕಿ.ಮೀ.ವರೆಗಿನ ತೆರೆದ ಕಾಲುವೆಯ ಬದಲಾಗಿ HDPE ಪೈಪುಗಳನ್ನು ಅಳವಡಿಸುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಅನುಮೋದನೆಗೊಂಡ ನಂತರ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು. ಅರಣ್ಯ ಪ್ರದೇಶದಲ್ಲಿ ಬರುವ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಮುಖ್ಯ ಕಾಲುವೆ ಕಿ.ಮೀ 5.00 ರಿಂದ 39.00 ಕಿ.ಮೀ ವರೆಗೆ ಒಟ್ಟು 6 ಪ್ಯಾಕೇಜ್‌ಗಳ ಕಾಮಗಾರಿಗಳನ್ನು ನವೆಂಬರ್-2020ರಲ್ಲಿ ಗುತ್ತಿಗೆ ವಹಿಸಲಾಗಿದ್ದು, ಸದರಿ ಕಾಮಗಾರಿಯನ್ನು ಪ್ರಾರಂಭ ಮಾಡುವ ಹಂತದಲ್ಲಿ ಭೂಸ್ವಾಧೀನ ತಕರಾರಿನ ಕಾರಣ ಸದರಿ ಕಾಮಗಾರಿಗಳ 11(1) ನೋಟಿಸ್ ಅನ್ನು ಅಕ್ಟೋಬರ್-2021 ರಿಂದ ನೀಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಹೊಲಗಾಲುವೆ ಕಾಮಗಾರಿಗಳ ಅಂದಾಜು ಪತ್ರಿಕೆಗಳು ತಯಾರಿಕಾ ಹಂತದಲ್ಲಿರುತ್ತದೆ.

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಆ)	ಈ ಯೋಜನೆಯಡಿಯಲ್ಲಿ ಕಾಲುವೆಗಳನ್ನು ನಿರ್ಮಿಸಲು ರೈತರ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ; ಭೂಸ್ವಾಧೀನಪಡಿಸಿಕೊಂಡ ರೈತರ ಜಮೀನಿಗೆ ಪರಿಹಾರ ಕೊಡಲು ಎಷ್ಟು ಹಣ ಬೇಕಾಗುವುದು;	ಚಚಡಿ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಗಾಗಿ ಒಟ್ಟು 207 ಎಕರೆ - 08 ಗುಂಟೆ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು 11(1) ಅಧಿಸೂಚನೆಯಾಗಿದ್ದು, ಪ್ರಸ್ತುತ ಜೆ.ಎಂ.ಸಿ ಹಂತದಲ್ಲಿರುತ್ತದೆ. ವಿತರಣಾ ಕಾಲುವೆಯ ಒಟ್ಟು 93 ಎಕರೆ -38 ಗುಂಟೆ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು 11(1) ಹಂತದಲ್ಲಿರುತ್ತದೆ. ಸಂಬಂಧಿಸಿದ ಪ್ರಕ್ರಿಯೆಗಳು ಪೂರ್ಣಗೊಂಡು ದರ ನಿಗದಿಪಡಿಸಿದ ನಂತರ ಪರಿಹಾರ ಮೊತ್ತ ಪಾವತಿಸಲು ಕ್ರಮವಹಿಸಲಾಗುವುದು.
ಇ)	ಭೂಮಿ ಕಳೆದುಕೊಂಡಿರುವ ರೈತರಿಗೆ ಇದುವರೆವಿಗೂ ಪರಿಹಾರ ಮೊತ್ತ ನೀಡದೇ ಇರುವ ಸಂಗತಿ ನಿಜವಲ್ಲವೆ;	
ಈ)	ಹಾಗಾದರೆ, ಕೂಡಲೇ ಈ ರೈತರಿಗೆ ಪರಿಹಾರವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?	

ಸಂಖ್ಯೆ: ಜಸಂಇ 94 ಡಬ್ಲ್ಯೂಎಲ್ಎ 2022

(ಗೋವಿಂದ ಎಂ ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 19
2. ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
3. ಉತ್ತರಿಸಬೇಕಾದ ದಿನಾಂಕ : 20.12.2022
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡ ಏತ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಪ್ರಸ್ತುತ ಈ ಯೋಜನೆ ಯಾವ ಹಂತದಲ್ಲಿರುತ್ತದೆ;	ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 08 ಗ್ರಾಮಗಳಿಗೆ ಒಟ್ಟು 1939 ಹೆಕ್ಟೇರ್ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಮುರುಗೋಡ ಏತ ನೀರಾವರಿ ಯೋಜನೆಗೆ ದಿನಾಂಕ: 17.04.2007 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಸದರಿ ಯೋಜನೆಯ ಕಾಮಗಾರಿಯನ್ನು ದಿನಾಂಕ: 05.12.2016 ರಂದು ಪ್ರಾರಂಬಿಸಿದ್ದು, ಯೋಜನೆಯ ಹೆಡ್ ವರ್ಕ್, ಪಂಪ್‌ಹೌಸ್ & ಸಬ್ ಸ್ಟೇಷನ್ ಕಾಮಗಾರಿಗಳು ದಿನಾಂಕ: 19.02.2019 ರಂದು ಪೂರ್ಣಗೊಂಡಿರುತ್ತದೆ. ಸದರಿ ಯೋಜನೆಯಲ್ಲಿ ಬರುವ ಒಟ್ಟಾರೆ 26 ಕಿ.ಮೀ ಉದ್ದದ ಕಾಲುವೆಯ (ಮುಖ್ಯ+ವಿತರಣಾ ಕಾಲುವೆ) ಪೈಕಿ 24 ಕಿ.ಮೀ ಪೂರ್ಣಗೊಂಡಿರುತ್ತದೆ. ಹೊಲಗಾಲುವೆಯ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
ಆ)	ಈ ಯೋಜನೆಯಡಿಯಲ್ಲಿ ಕಾಲುವೆಗಳನ್ನು ನಿರ್ಮಿಸಲು ರೈತರ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ; ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ಕೊಡಲು ಎಷ್ಟು ಹಣ ಬೇಕಾಗುವುದು;	ಸದರಿ ಯೋಜನೆಯಡಿ ಇದುವರೆಗೂ 167 ಎಕರೆ 22 ಗುಂಟೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಇದರಲ್ಲಿ ಹೆಡ್ ವರ್ಕ್ ಮತ್ತು ರೈಸಿಂಗ್ ಮೇನ್ ಕಾಮಗಾರಿ ಅಡಿಯಲ್ಲಿ ಬರುವ ಒಟ್ಟು 7 ಎಕರೆ 35 ಗುಂಟೆ ಜಮೀನಿನ ಒಟ್ಟು ಭೂಪರಿಹಾರ ಹಣವಾಗಿ ರೂ.95,68,109.00 ಗಳನ್ನು ರೈತರಿಗೆ ಈಗಾಗಲೇ ಒದಗಿಸಲಾಗಿದೆ. ಇನ್ನುಳಿದ ಒಟ್ಟು 159 ಎಕರೆ 27 ಗುಂಟೆ ಕ್ಷೇತ್ರಕ್ಕೆ ಜೆ.ಎಂ.ಸಿ ಕಾರ್ಯ ಮುಕ್ತಾಯಗೊಂಡಿದೆ. ಈ ಹಂತದಲ್ಲಿ ಭೂಪರಿಹಾರವನ್ನು ನಿಗದಿ ಪಡಿಸಲು ಸಾಧ್ಯವಿಲ್ಲದ ಕಾರಣ ಪ್ರಕ್ರಿಯೆಯ ಅಂತಿಮದಲ್ಲಿ ಇನ್ನೂ ಬೇಕಾಗಿರುವ ಹಣವನ್ನು ನಿಗದಿಪಡಿಸಬೇಕಾಗಿರುತ್ತದೆ.
ಇ)	ಭೂಮಿ ಕಳೆದುಕೊಂಡಿರುವ ರೈತರಿಗೆ ಇದುವರೆವಿಗೂ ಪರಿಹಾರದ ಮೊತ್ತ ನೀಡದೇ ಇರುವುದು ನಿಜವಲ್ಲವೆ;	
ಈ)	ಹಾಗಾದರೆ, ಕೂಡಲೇ ಈ ರೈತರಿಗೆ ಪರಿಹಾರವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?	

ಸಂಖ್ಯೆ: ಜಸಂಇ 95 ಡಬ್ಲ್ಯೂಎಲ್‌ಎ 2022

(ಗೋವಿಂದ ಎಂ ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 21
ಸದಸ್ಯರ ಹೆಸರು : ಶ್ರೀ ಸೋಮನಗೌಡ ಬಿ.ಪಾಟೀಲ್ (ಸಾಸನೂರು) (ದೇವರಹಿಪ್ಪರಗಿ)
ಉತ್ತರಿಸುವ ದಿನಾಂಕ : 20.12.2022
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
(ಅ)	ದೇವರಹಿಪ್ಪರಗಿ ಮತಕ್ಷೇತ್ರದ ಹುಣಸ್ಯಾಳ ಮತ್ತು ಕುದುರಗೊಂಡ ಗ್ರಾಮಗಳ ಕೆರೆ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ಯಾರು ಟೆಂಡರ್ ಪಡೆದುಕೊಂಡಿದ್ದಾರೆ; ಅವರ ಹೆಸರು ಮತ್ತು ವಿಳಾಸ ಸಹಿತ ವಿವರ ನೀಡುವುದು;	ದೇವರಹಿಪ್ಪರಗಿ ಮತಕ್ಷೇತ್ರದ ಹುಣಶ್ಯಾಳ ಗ್ರಾಮದ ಕೆರೆ ತುಂಬಿಸುವ ಕಾಮಗಾರಿಯನ್ನು ರೂ.488.44 ಲಕ್ಷಗಳಿಗೆ ಹಾಗೂ ಕುದುರಗೊಂಡ ಗ್ರಾಮದ ಕೆರೆ ತುಂಬಿಸುವ ಕಾಮಗಾರಿಯನ್ನು ರೂ.404.81 ಲಕ್ಷಗಳ ಮೊತ್ತಕ್ಕೆ ಮೆ:ಸೂರ್ಯ ಕನ್‌ಸ್ಟ್ರಕ್ಷನ್, ಗುತ್ತಿಗೆದಾರರು, ನಂ.1781, 8ನೇ ಬ್ಲಾಕ್, ವಿಶ್ವೇಶ್ವರಯ್ಯ ಮುದ್ದಿನಪಾಳ್ಯ ಮುಖ್ಯ ರಸ್ತೆ, ಬೆಂಗಳೂರು-560091 ಇವರಿಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದೆ.
(ಆ)	ಟೆಂಡರ್ ಪಡೆದ ಗುತ್ತಿಗೆದಾರರು ಇದುವರೆಗೆ ಕಾಮಗಾರಿ ಪ್ರಾರಂಭಿಸದೇ ಇರುವುದಕ್ಕೆ ಕಾರಣಗಳೇನು; ಈ ರೀತಿ ವಿಳಂಬ ಮಾಡಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಗುತ್ತಿಗೆದಾರರು ಹುಣಶ್ಯಾಳ ಮತ್ತು ಕುದರಗೊಂಡ ಗ್ರಾಮದ ಕೆರೆಗಳನ್ನು ತುಂಬಿಸುವ 02 ಕಾಮಗಾರಿಗಳನ್ನು ದಿನಾಂಕ: 02.08.2021 ರಂದು ಪ್ರಾರಂಭಿಸಿದ್ದು, ಕಾಮಗಾರಿಯನ್ನು ಟೆಂಡರ್ ನಿಯಮಾವಳಿಗಳ ಪ್ರಕಾರ ದಿನಾಂಕ: 01.05.2022 ರಂದು ಪೂರ್ಣಗೊಳಿಸಬೇಕಾಗಿರುತ್ತದೆ. ಹುಣಶ್ಯಾಳ ಮತ್ತು ಕುದರಗೊಂಡ ಗ್ರಾಮದ ಕೆರೆಗಳನ್ನು ತುಂಬಿಸುವ 02 ಕಾಮಗಾರಿಗಳಿಗೆ ನಿಗದಿಪಡಿಸಿದ ಕಾಲಾವಧಿ- 09 ತಿಂಗಳು.
(ಇ)	ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ ಎಷ್ಟು;	
(ಈ)	ವಿಳಂಬ ಮಾಡಿರುವ ಗುತ್ತಿಗೆದಾರರ ಟೆಂಡರನ್ನು ರದ್ದುಪಡಿಸಿ, ಮುನರ್ ಟೆಂಡರ್ ಕರೆಯುವುದಾದಲ್ಲಿ ಯಾವಾಗ ಟೆಂಡರ್ ಕರೆಯಲಾಗುವುದು? (ವಿವರ ನೀಡುವುದು)	ಸದರಿ ಕಾಮಗಾರಿಯು ಪೈಪ್‌ಲೈನ್ ಮುಖಾಂತರ ಕೆರೆಗೆ ನೀರನ್ನು ತುಂಬಿಸುವುದು ಒಳಗೊಂಡಿದ್ದು, ಪೈಪ್‌ಲೈನ್ ಅಳವಡಿಸುವ ಸಂದರ್ಭದಲ್ಲಿ ರೈತರು ಬೆಳೆಗಳನ್ನು ಕಟಾವು ಮಾಡಿದ ನಂತರ ಪೈಪ್‌ಲೈನ್ ಅಳವಡಿಸಲು ವಿನಂತಿಸಿಕೊಂಡ ಕಾರಣ ಕಾಮಗಾರಿಯು ವಿಳಂಬವಾಗಿರುತ್ತದೆ. ಗುತ್ತಿಗೆದಾರರಿಗೆ ಈಗಾಗಲೇ ತುರ್ತಾಗಿ ಬಾಕಿ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸುವ ಬಗ್ಗೆ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯನ್ನು ರೂಪಿಸಿಕೊಂಡು ಅದರಂತೆ ಪ್ರಗತಿ ಸಾಧಿಸಲು ತಿಳಿಸಿ ತಪ್ಪಿದಲ್ಲಿ ಟೆಂಡರ್ ನಿಯಮಗಳಂತೆ ಕ್ರಮ ಜರುಗಿಸಲಾಗುವುದಾಗಿ ನೋಟೀಸ್‌ಗಳನ್ನು ನೀಡಲಾಗಿರುತ್ತದೆ. ಪ್ರಸ್ತುತ ಕಾಮಗಾರಿಯ ಪ್ರಗತಿಯನ್ನು ಅವಲೋಕಿಸಿ ಟೆಂಡರ್ ನಿಯಮಾವಳಿ ಪ್ರಕಾರ ಕ್ರಮ ಜರುಗಿಸಲಾಗುವುದು.

ಸಂಖ್ಯೆ:ಜಸಂಇ 121 ಡಬ್ಲ್ಯೂಬಿಎಂ 2022

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 22
ಸದಸ್ಯರ ಹೆಸರು : ಶ್ರೀ ಸೋಮನಗೌಡ ಬಿ.ಪಾಟೀಲ್ (ಸಾಸನೂರು) (ದೇವರ ಹಿಪ್ಪರಗಿ)
ಉತ್ತರಿಸುವ ದಿನಾಂಕ : 20.12.2022
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
(ಅ)	ದೇವರಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಮ್ಮಲಗಿ ಏತ ನೀರಾವರಿ ಯೋಜನೆಯ ಪೂರ್ವ ಕಾಲುವೆ ವಿತರಣಾ ಜಾಲದ ಕಾಮಗಾರಿಯನ್ನು ಮೆ: ಉದಯ ಶಿವಕುಮಾರ ಇನ್ಫ್ರಾ ಪ್ರೈ. ಲಿ. ದಾವಣಗೆರೆ ಇವರು ಟೆಂಡರ್ ಪಡೆದು ಇಲ್ಲಿಯವರೆಗೆ ಕಾಮಗಾರಿಯನ್ನು ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ತೆಗೆದುಕೊಂಡಿರುವ ಕ್ರಮಗಳೇನು;	ಚಿಮ್ಮಲಗಿ ಏತ ನೀರಾವರಿ ಯೋಜನೆ ಕೃ.ಮೇ.ಯೋ. ಹಂತ-3 ರಡಿಯ ಒಂದು ಪ್ರಮುಖ ಉಪ ಯೋಜನೆಯಾಗಿದ್ದು, ದೇವರಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿನ ಚಿಮ್ಮಲಗಿ ಪೂರ್ವ ಕಾಲುವೆಯ ಕಿ. ಮೀ. 50.00 ರಿಂದ 130.00ರ ವ್ಯಾಪ್ತಿಯಲ್ಲಿ ಬರುವ ವಿತರಣಾ ಕಾಲುವೆ ಸಂಖ್ಯೆ:30 ರಿಂದ 60 ಹಾಗೂ ಇದರಡಿಯ ಲ್ಯಾಟರಲ್‌ಗಳ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ಮೆ: ಉದಯ ಶಿವಕುಮಾರ ಇನ್ಫ್ರಾ ಪ್ರೈ. ಲಿ. ದಾವಣಗೆರೆ ಇವರಿಗೆ ದಿನಾಂಕ 31.07.2021 ರಂದು ವಹಿಸಲಾಗಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳುಗಳ ಕಾಲಾವಧಿಯನ್ನು ನಿಗಧಿಪಡಿಸಲಾಗಿತ್ತು. ಟೆಂಡರ್ ಕರಾರಿನ ಪ್ರಕಾರ ದಿನಾಂಕ: 30.01.2023ರ ಒಳಗಾಗಿ ಕಾಮಗಾರಿ ಪೂರ್ಣಗೊಳಿಸಬೇಕಾಗಿರುತ್ತದೆ. ದೇವರ ಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿತರಣಾ ಕಾಲುವೆ ಸಂಖ್ಯೆ: 44 ರಿಂದ 60ರ ವರೆಗೆ ಭೂಸ್ವಾಧೀನ ಪ್ರಕ್ರಿಯೆಯ ವಿಳಂಭದಿಂದಾಗಿ ಗುತ್ತಿಗೆದಾರರು ಸದರಿ ವಿತರಣಾ ಕಾಲುವೆಗಳನ್ನು ಪ್ರಾಂಭಿಸಿರುವುದಿಲ್ಲ. ಟೆಂಡರ ಕರಾರಿನ ಪ್ರಕಾರ ಕಾಲುವೆ ಹಾಯ್ದು ಹೋಗುವ ಜಮೀನುಗಳ ರೈತರಿಂದ ಸ್ವತಃ ಗುತ್ತಿಗೆದಾರರೇ ಭೂಮಾಲೀಕರಿಂದ ಒಪ್ಪಿಗೆ ಪಡೆದು ಕಾಮಗಾರಿ ಪ್ರಾರಂಭಿಸಬೇಕಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲು ಗುತ್ತಿಗೆದಾರರಿಗೆ ನೋಟಿಸ್ ನೀಡಿ ಕಾಮಗಾರಿಗಳನ್ನು ಪ್ರಾರಂಭಿಸಲು ಸೂಚಿಸಲಾಗಿದೆ. ಸದರಿ ವಿತರಣಾ ಕಾಲುವೆಗಳಿಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕರಣಗಳು ಜೆ.ಎಂ.ಸಿ. ಹಂತದಲ್ಲಿದ್ದು, ಜಮೀನುಗಳಲ್ಲಿನ ಬೆಳೆಗಳನ್ನು ಕಟಾವು ಮಾಡಿದ ನಂತರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಕೆಲ ರೈತರು ತಕರಾರು ಮಾಡಿರುತ್ತಾರೆ. ಇನ್ನೂ ಕೆಲವು ರೈತರು ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ಭೂಮಿಯ ವಿಸ್ತೀರ್ಣದ ಭೂ ಪರಿಹಾರ ಮೊತ್ತವನ್ನು ಪಾವತಿಸಿ ಕಾಮಗಾರಿಯನ್ನು ಪ್ರಾರಂಭಿಸಲು ತಕರಾರು ಮಾಡಿರುವುದರಿಂದ, ಸದರಿ ವಿತರಣಾ ಕಾಲುವೆಗಳ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವುದಿಲ್ಲ. ಭೂಸ್ವಾಧೀನ ಪ್ರಕ್ರಿಯೆಯನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ನಿಗಮದಿಂದ ಕ್ರಮವಹಿಸಲಾಗುತ್ತಿದೆ.
(ಆ)	ಈ ಕಾಮಗಾರಿಯನ್ನು 18 ತಿಂಗಳ ಕಾಲಾವಧಿಗಳೊಳಗೆ ಪೂರ್ಣಗೊಳಿಸುವ ಕರಾರು ಇದ್ದರೂ ಇದನ್ನು ಉಲ್ಲಂಘನೆ ಮಾಡಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು;	ಸದರಿ ಕಾಮಗಾರಿಯನ್ನು 18 ತಿಂಗಳುಗಳ ಒಳಗಾಗಿ ಅಂದರೆ 31.01.2023 ರೊಳಗಾಗಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಕಾಲಾವಕಾಶ ಇರುವುದು. ಬಾಕಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಪರಿಷ್ಕೃತ ಕಾರ್ಯಕ್ರಮವನ್ನು ರೂಪಿಸಿಕೊಂಡು, ಅದರಂತೆ ಪ್ರಗತಿ ಸಾಧಿಸಲು ಗುತ್ತಿಗೆದಾರರಿಗೆ ಸೂಚಿಸಲಾಗುವುದು. ಗುತ್ತಿಗೆದಾರರು ನಿಗಧಿತ ಪ್ರಗತಿ ಸಾಧಿಸಲು ವಿಫಲವಾದಲ್ಲಿ ಟೆಂಡರ್ ನಿಯಮಾವಳಿ ಪ್ರಕಾರ ಕ್ರಮ ಜರುಗಿಸಲಾಗುವುದು.
(ಇ)	ವಿಳಂಬ ಮಾಡಿರುವ ಗುತ್ತಿಗೆದಾರರ ಟೆಂಡರನ್ನು ರದ್ದುಪಡಿಸಿ, ಪುನರ್ ಟೆಂಡರ್ ಕರೆಯುವುದಾದಲ್ಲಿ ಯಾವಾಗ ಟೆಂಡರ್ ಕರೆಯಲಾಗುವುದು? (ವಿವರ ನೀಡುವುದು)	

ಸಂಖ್ಯೆ:ಜಸಂಇ 120 ಡಬ್ಲ್ಯೂಬಿಎಂ 2022

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 23
2. ಸದಸ್ಯರ ಹೆಸರು : ಶ್ರೀ ಐಹೊಳೆ ಡಿ.ಮಹಾಲಿಂಗಪ್ಪ
3. ಉತ್ತರಿಸಬೇಕಾದ ದಿನಾಂಕ : 20/12/2022
4. ಉತ್ತರಿಸುವ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನಸಭಾ ಕ್ಷೇತ್ರದ ರಾಯಭಾಗ ಹಾಗೂ ಚಿಕ್ಕೋಡಿ ತಾಲ್ಲೂಕುಗಳಲ್ಲಿರುವ ಸರ್ಕಾರಿ ಕೆರೆಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಕೆರೆಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯು ನಿರಂತರ ಪ್ರಕ್ರಿಯೆಯಾಗಿದ್ದು, ಕೆರೆಗಳ ಅಭಿವೃದ್ಧಿಯ ಅವಶ್ಯಕತೆ ಹಾಗೂ ಲಭ್ಯವಾಗುವ ಅನುದಾನವನ್ನು ಆಧರಿಸಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ರೂ.115.00 ಲಕ್ಷ ಅಂದಾಜು ವೆಚ್ಚದಲ್ಲಿ 3 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.
ಆ	ಹಾಗಿದ್ದಲ್ಲಿ, ಯಾವ ಯಾವ ಕೆರೆಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ; ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು; ಯಾವ ಕಾಲಮಿತಿಯಲ್ಲಿ ಈ ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು;	2019-20ನೇ ಸಾಲಿನಿಂದ 2021-22ನೇ ಸಾಲಿನವರೆಗೆ ರೂ.326.11 ಲಕ್ಷ ಅಂದಾಜು ವೆಚ್ಚದಲ್ಲಿ 16 ಕೆರೆಗಳಲ್ಲಿ 18 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. ಸದರಿ ಕಾಮಗಾರಿಗಳಿಗೆ ರೂ.291.33 ಲಕ್ಷ ವೆಚ್ಚ ಮಾಡಲಾಗಿದೆ. 2022-23ನೇ ಸಾಲಿನ ಆಯವ್ಯಯದ ಭಾಷಣದಲ್ಲಿ "ರಾಜ್ಯದ ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ರೂ.500.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು ಹಾಗೂ ಇದರಲ್ಲಿ ಪ್ರವಾಹದಿಂದ ಹಾನಿಯಾಗಿರುವ ಕೆರೆಗಳ ದುರಸ್ತಿಯನ್ನು ಕೈಗೊಂಡು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲು ರೂ.200.00 ಕೋಟಿಗಳನ್ನು ಮೀಸಲಾಗಿಡಲಾಗುವುದು" ಎಂದು ಘೋಷಿಸಲಾಗಿರುತ್ತದೆ. ಅದರಂತೆ, ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ರೂ.300.00 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಲ್ಲಿ ರಾಯಬಾಗ ವಿಧಾನಸಭಾ ಕ್ಷೇತ್ರದಲ್ಲಿ ರೂ.115.00 ಲಕ್ಷ ಅಂದಾಜು ವೆಚ್ಚದಲ್ಲಿ 3 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ

		ನೀಡಲಾಗಿದ್ದು, ಸದರಿ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ. ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಲಾಗಿದೆ.
ಇ	ಉಳಿದ್ದ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಗುವುದೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಜಿಸಿದೆ;	ರಾಯಬಾಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ 16 ಕೆರೆಗಳಿರುತ್ತವೆ. ಕಂಡಿಕೆ (ಆ)ರಲ್ಲಿ ತಿಳಿಸಿರುವಂತೆ ಈಗಾಗಲೇ ಎಲ್ಲ 16 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ.
ಈ	ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ತಗಲಬಹುದಾದ ಅಂದಾಜು ವೆಚ್ಚವೆಷ್ಟು; ಇಲ್ಲದಿದ್ದಲ್ಲಿ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)	ಕೆರೆಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯು ನಿರಂತರ ಪ್ರಕ್ರಿಯೆಯಾಗಿದ್ದು, ಕೆರೆಗಳ ಅಭಿವೃದ್ಧಿಯ ಅವಶ್ಯಕತೆ ಹಾಗೂ ಲಭ್ಯವಾಗುವ ಅನುದಾನವನ್ನು ಆಧರಿಸಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.

ಕಡತ ಸಂಖ್ಯೆ:MID 364 LAQ 2022

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ
ಸಚಿವರು

(1)

ವಿಧಾನಸಭೆ ಸದಸ್ಯರಾದ ಮಾನ್ಯ ಶ್ರೀ ಐಹೊಳೆ ಮಹಾಲಿಂಗಪ್ಪ (ರಾಯಭಾಗ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:23 ಕ್ಕೆ ಅನುಬಂಧ

ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನಸಭಾ ಕ್ಷೇತ್ರದ ರಾಯಭಾಗ ಹಾಗೂ ಚಿಕ್ಕೋಡಿ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಈಗಾಗಲೆ ಕೈಗೊಳ್ಳಲಾಗಿರುವ ಕೆರೆ ಅಭಿವೃದ್ಧಿ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

ಕ್ರ.ಸಂ.	ವರ್ಷ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕೆರೆ ಅಭಿವೃದ್ಧಿ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ	ಷರಾ
1	2	3	4	5	6	7	8	9
1	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೂದಿಹಾಳ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.85	ಪೂರ್ಣಗೊಂಡಿದೆ	
2	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬ್ಯಾಕೂಡ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.85	ಪೂರ್ಣಗೊಂಡಿದೆ	
3	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಮಿರಗಸಾಲಿ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.85	ಪೂರ್ಣಗೊಂಡಿದೆ	
4	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬಿರನಾಳ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.85	ಪೂರ್ಣಗೊಂಡಿದೆ	
5	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಮಾವಿನಹೊಂಡ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.85	ಪೂರ್ಣಗೊಂಡಿದೆ	
6	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಕಂಪಾಂಜಲಿ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.85	ಪೂರ್ಣಗೊಂಡಿದೆ	
7	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಜೋಡಪಟ್ಟಿ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.85	ಪೂರ್ಣಗೊಂಡಿದೆ	
8	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಮೇಖಳಿ ಕೆರೆಯ ಪುನರುಜ್ಜೀವನ ಕಾಮಗಾರಿ	15.00	13.38	ಪೂರ್ಣಗೊಂಡಿದೆ	

ಕ್ರ.ಸಂ.	ವರ್ಷ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕೆರೆ ಅಭಿವೃದ್ಧಿ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ	ಷರಾ
1	2	3	4	5	6	7	8	9
9	2019-20	ರಾಯಬಾಗ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೆಂಡವಾಡ ಕೆರೆಯ ಪುನರುಜ್ಜೀವನ ಕಾಮಗಾರಿ	15.00	13.38	ಪೂರ್ಣಗೊಂಡಿದೆ	
10	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಜೈನಾಪೂರ (ಸೈಟ್-1), ಅತೀವೃಷ್ಟಿಯಿಂದ ಹಾನಿಯಾದ ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.80	ಪೂರ್ಣಗೊಂಡಿದೆ	
11	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಜೈನಾಪೂರ (ಸೈಟ್-2) ಕೆರೆಯ ಪುನರುಜ್ಜೀವನ ಕಾಮಗಾರಿ	20.00	17.80	ಪೂರ್ಣಗೊಂಡಿದೆ	
12	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ವಡ್ರಾಳ & ಮುಗಳಿ ಕೆರೆಗಳು ಪುನರುಜ್ಜೀವನ ಕಾಮಗಾರಿ	20.00	17.80	ಪೂರ್ಣಗೊಂಡಿದೆ	
13	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮೀರಾಪುರಹಟ್ಟಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ	20.00	17.80	ಪೂರ್ಣಗೊಂಡಿದೆ	
14	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಚನ್ನವೀರಹಟ್ಟಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ ಕಾಮಗಾರಿ	20.00	17.80	ಪೂರ್ಣಗೊಂಡಿದೆ	
15	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮೀರಾಪುರಹಟ್ಟಿ-2 ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ ಕಾಮಗಾರಿ	20.00	17.80	ಪೂರ್ಣಗೊಂಡಿದೆ	

ಕ್ರ.ಸಂ.	ವರ್ಷ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕೆರೆ ಅಭಿವೃದ್ಧಿ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ವೆಚ್ಚ	ಕಾಮಗಾರಿಯ ಹಂತ	ಷರಾ
1	2	3	4	5	6	7	8	9
16	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲ ಚಿಕ್ಕೋಡಿ ತಾಲ್ಲೂಕಿನ ಮುಗಳಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಮನರುಜ್ಜೀವನ ಕಾಮಗಾರಿ ಕಾಮಗಾರಿ	15.00	13.37	ಪೂರ್ಣಗೊಂಡಿದೆ	
17	2019-20	ಚಿಕ್ಕೋಡಿ	4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು	ಬೆಳಗಾವಿ ಜಿಲ್ಲ ಚಿಕ್ಕೋಡಿ ತಾಲ್ಲೂಕಿನ ನಂದಿಕುರಳಿ ಕೆರೆಯ ಅತೀವೃಷ್ಟಿ & ಪ್ರವಾಹದಿಂದ ಹಾನಿಯಾಗಿರುವುದರಿಂದ ಪುನರುಜ್ಜೀವನ ಕಾಮಗಾರಿ	15.00	13.39	ಪೂರ್ಣಗೊಂಡಿದೆ	
18	2021-22	ರಾಯಬಾಗ	ವಿಶೇಷ ಅಭಿವೃದ್ಧಿ ಯೋಜನೆ	ಬೆಳಗಾವಿ ಜಿಲ್ಲ ರಾಯಬಾಗ ತಾಲ್ಲೂಕಿನ ಜೆಂಡವಾಡ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿ	6.11	6.06	ಪೂರ್ಣಗೊಂಡಿದೆ	
				ಒಟ್ಟು	326.11	291.33		
19	2022-23	ರಾಯಬಾಗ	4702 ಕೆರೆಗಳ ಸಮಗ್ರ ಅಭಿವೃದ್ಧಿ ಯೋಜನೆ	ಬಿರನಾಳ ಸಣ್ಣ ನೀರಾವರಿ ಕೆರೆ ಅಭಿವೃದ್ಧಿ ಕಾಮಗಾರಿ	40.00	0.00		ಟೆಂಡರ್ ಪ್ರಕ್ರಿಯೆಯಲ್ಲಿದೆ
20	2022-23	ರಾಯಬಾಗ	4702 ಕೆರೆಗಳ ಸಮಗ್ರ ಅಭಿವೃದ್ಧಿ ಯೋಜನೆ	ಮೇಖಳಿ ಸಣ್ಣ ನೀರಾವರಿ ಕೆರೆ ಅಭಿವೃದ್ಧಿ ಕಾಮಗಾರಿ	40.00	0.00		ಟೆಂಡರ್ ಪ್ರಕ್ರಿಯೆಯಲ್ಲಿದೆ
21	2022-23	ರಾಯಬಾಗ	4702 ಕೆರೆಗಳ ಸಮಗ್ರ ಅಭಿವೃದ್ಧಿ ಯೋಜನೆ	ಜೆಂಡವಾಡ ಸಣ್ಣ ನೀರಾವರಿ ಕೆರೆ ಅಭಿವೃದ್ಧಿ ಕಾಮಗಾರಿ	35.00	0.00		ಟೆಂಡರ್ ಪ್ರಕ್ರಿಯೆಯಲ್ಲಿದೆ
				ಒಟ್ಟು	115.00	0.00		
				ಮತಕ್ಷೇತ್ರದ ಒಟ್ಟು	441.11	291.33		

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 24

ಸದಸ್ಯರ ಹೆಸರು : ಶ್ರೀ ಐಹೊಳೆ ಡಿ.ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸಬೇಕಾದ ದಿನಾಂಕ : 20-12-2022

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ 7ನೇ ವೇತನ ಆಯೋಗವನ್ನು ರಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ಕುರಿತಂತೆ, ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಶೀಲಿಸಲು ದಿ: 19.11.2022ರ ಸರ್ಕಾರಿ ಆದೇಶ ಸಂ: ಆಇ 45 ಎಸ್ ಆರ್ ಪಿ 2022 ರಲ್ಲಿ ತ್ರಿಸದಸ್ಯರ 7ನೇ ರಾಜ್ಯ ವೇತನ ಆಯೋಗವನ್ನು ರಚಿಸಿ ಆದೇಶಿಸಲಾಗಿರುತ್ತದೆ. ವೇತನ ಆಯೋಗವು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು 06 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆ.
(ಆ)	ಹಾಗಿದ್ದಲ್ಲಿ, ಸದರಿ ಆಯೋಗದ ಮಧ್ಯಂತರ ವರದಿಯನ್ನು ಯಾವಾಗ ನಿರೀಕ್ಷಿಸಲಾಗಿದೆ; ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ನಿಗದಿಪಡಿಸಿರುವ ಕಾಲಮಿತಿಯೇನು;	
(ಇ)	ರಾಜ್ಯ ಸರ್ಕಾರಿ ನೌಕರರ ಪ್ರಸ್ತುತ ವೇತನವನ್ನು ಪರಿಷ್ಕರಿಸಿ ಎಷ್ಟು ಶೇಕಡ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆ; ಯಾವ ಕಾಲಮಿತಿಯಲ್ಲಿ ರಾಜ್ಯ ಸರ್ಕಾರಿ ನೌಕರರು ತಮ್ಮ ಪರಿಷ್ಕೃತ ವೇತನ ಸೌಲಭ್ಯವನ್ನು ಪಡೆಯಲಿದ್ದಾರೆ;	ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.
(ಈ)	ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ಉಪದಾನ ಮತ್ತು ಮರಣ ಉಪದಾನಗಳನ್ನು ಹಾಗೂ ಗಳಿಕೆ ರಜೆ ನಗಧೀಕರಣದ ದಿನಗಳನ್ನು ಪರಿಷ್ಕರಿಸಿ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	
(ಉ)	ಹಾಗಿದ್ದಲ್ಲಿ, ಎಷ್ಟು ಹೆಚ್ಚಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಸಂ: ಆಇ 48 ಎಸ್‌ಆರ್‌ಪಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

(37)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ. ಐಹೊಳೆ ಡಿ. ಮಹಾಲಿಂಗಪ್ಪ(ರಾಯಭಾಗ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	25
ಉತ್ತರ ದಿನಾಂಕ	:	20.12.2022
ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ, ರಾಯಬಾಗ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಬೆಳಗಾವಿ ಜಿಲ್ಲೆ, ರಾಯಬಾಗ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಕ್ಷೇತ್ರ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಹೊಸ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ; (ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಇ)	ಇಲ್ಲದಿದ್ದಲ್ಲಿ ಹೊಸದಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು;	ಹೊಸದಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯಾವುದೇ ತೊಂದರೆಗಳು ಇರುವುದಿಲ್ಲ.
ಈ)	ಇಲ್ಲದಿದ್ದಲ್ಲಿ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಸ್ವೀಕೃತವಾದ ಪ್ರಸ್ತಾವನೆಯಲ್ಲಿ ಕುಡಿಯುವ ನೀರು ಕಲುಷಿತವೆಂದು ಕಂಡು ಬಂದಲ್ಲಿ ಜಿಲ್ಲಾ ಪರೀಕ್ಷಾ ಪ್ರಯೋಗಾಲಯ, NABL ಪರೀಕ್ಷಾ ಪ್ರಯೋಗಾಲಯ ಮತ್ತು KSPCB ಪರೀಕ್ಷಾ ಪ್ರಯೋಗಾಲಯಗಳ ವರದಿಯೊಂದಿಗೆ ನಿಗಧಿತ ಚೆಕ್‌ಲಿಸ್ಟ್ ಸಲ್ಲಿಸಿದ ನಂತರ ಶುದ್ಧ ಕುಡಿಯುವ ನೀರಿನ ಘಟಕದ ಅವಶ್ಯಕತೆ ಇದ್ದಲ್ಲಿ ಮಾತ್ರ ಪ್ರಸ್ತಾವನೆಯನ್ನು ಅನುಮೋದಿಸಲಾಗುವುದು.

ಸಂ:ಗ್ರಾಕುನೀ&ನೈಇ 576 ಗ್ರಾನೀಸ(4)2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 26

ಮಾನ್ಯ ಸದಸ್ಯರ ಹೆಸರು : ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸುವ ದಿನಾಂಕ : 20.12.2022

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2006ನೇ ಸಾಲಿನಿಂದ ಸರ್ಕಾರದ ಸೇವೆಗೆ ನೇಮಕವಾದ ನೌಕರರಿಗೆ ಹೊಸ ಪಿಂಚಣಿ ವ್ಯವಸ್ಥೆ (NPS) ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು</td></tr>
<tr><td>ಆ)</td><td>ಹಾಗಿದ್ದಲ್ಲಿ, ದೇಶದ ಹಲವು ರಾಜ್ಯಗಳು ಈ ಪಿಂಚಣಿ ವ್ಯವಸ್ಥೆಯನ್ನು ತನ್ನ ನೌಕರರುಗಳಿಗೆ ಅಳವಡಿಸದೇ ಹಳೆಯ ಪಿಂಚಣಿ ವ್ಯವಸ್ಥೆಯಡಿಯಲ್ಲಿ ನೌಕರರಿಗೆ ಹಾಗೂ ಅವರ ಅವಲಂಭಿತರಿಗೆ ಪಿಂಚಣಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಇಲ್ಲ</td></tr>
<tr><td>ಇ)</td><td>ಈ ಹೊಸ ಪಿಂಚಣಿ ವ್ಯವಸ್ಥೆಯನ್ನು ರದ್ದು ಪಡಿಸಲು ಸರ್ಕಾರ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು;</td><td rowspan="3">ಹಳೆಯ ಪಿಂಚಣಿ ಯೋಜನೆಯ ಆರ್ಥಿಕ ಹೊರೆಯನ್ನು ನಿಭಾಯಿಸಲು ಸಾಕಷ್ಟು ನಿಧಿಯ ಆಧಾರ ಇಲ್ಲದಿರುವುದರಿಂದ ಹಾಗೂ ರಿಸರ್ವ್ ಬ್ಯಾಂಕ್ ರವರು ರಚಿಸಿದ ಸಮಿತಿಯ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ದಿನಾಂಕ: 01.01.2004 ರಿಂದ ಜಾರಿಗೊಳಿಸಿರುತ್ತದೆ. ಅದರಂತೆಯೇ ಇತರೆ ರಾಜ್ಯಗಳು ಈ ಯೋಜನೆಯನ್ನು ಅಳವಡಿಸಿಕೊಂಡ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯವು ಕೂಡ ಸರ್ಕಾರದ ಆದೇಶ ಸಂಖ್ಯೆ: ಆಇ (ಎಸ್.ಪಿ.ಎಲ್.) 04 ಪಿಇಟಿ 2005, ದಿನಾಂಕ: 31.03.2006 ರನ್ವಯ ದಿನಾಂಕ: 01.04.2006 ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರುವ ನೌಕರರಿಗೆ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುತ್ತದೆ.

ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.</td></tr>
<tr><td>ಈ)</td><td>ಯಾವ ಕಾಲಮಿತಿಯಲ್ಲಿ ಈ ಹೊಸ ಪಿಂಚಣಿ ವ್ಯವಸ್ಥೆಯನ್ನು ರದ್ದು ಪಡಿಸಿ ಎಲ್ಲಾ ನೌಕರರುಗಳನ್ನು ಹಳೆಯ ಪಿಂಚಣಿ ವ್ಯವಸ್ಥೆಗೆ ಒಳಪಡಿಸಲಾಗುವುದು;</td></tr>
<tr><td>ಉ)</td><td>ಇಲ್ಲದಿದ್ದಲ್ಲಿ ಕಾರಣಗಳೇನು?</td></tr>
</table>

ಆಇ-ಪಿಇಎನ್/323/2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

(7)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	27
ಸದಸ್ಯರ ಹೆಸರು	:	ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸುವ ದಿನಾಂಕ	:	20.12.2022
ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಯವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ಜಿಲ್ಲೆ ರಾಯಭಾಗ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸ ಗ್ರಾಮ ಪಂಚಾಯಿತಿ ಕೇಂದ್ರಗಳನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು.
(ಆ)	ಹಾಗಿದ್ದಲ್ಲಿ, ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಹೊಸ ಗ್ರಾಮ ಪಂಚಾಯಿತಿ ಕೇಂದ್ರಗಳನ್ನು ರಚಿಸಲು ಉದ್ದೇಶಿಸಲಾಗಿದೆ; ಆ ಕೇಂದ್ರಗಳು ಯಾವುವು; ಆ ಕೇಂದ್ರಗಳ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರಗಳೇನು; (ಸಂಪೂರ್ಣ ವಿವರ ನೀಡುವುದು)	ರಾಯಭಾಗ(ಗ್ರಾಮೀಣ) ಗ್ರಾಮ ಪಂಚಾಯತಿ ವ್ಯಾಪ್ತಿಯ ಕಂಚಕರವಾಡಿ ಗ್ರಾಮ ಪಂಚಾಯತಿಯನ್ನಾಗಿ ಹಾಗೂ ಬ್ಯಾಕೂಡ ಗ್ರಾಮ ಪಂಚಾಯತಿಯಿಂದ ಬಿರನಾಳ ಮತ್ತು ಬೊಮ್ಮನಾಳ ಗ್ರಾಮಗಳನ್ನು ಸೇರಿಸಿ ಬೊಮ್ಮನಾಳ ಗ್ರಾಮ ಪಂಚಾಯತಿಯನ್ನಾಗಿ ಮತ್ತು ಚಿಕ್ಕೋಡಿ ತಾಲ್ಲೂಕಿನ ಜಾಗನೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ವಿಜಯನಗರ, ಸ್ನೇಹನಗರ ಹಾಗೂ ಮೋಗತ್ಯಾನಟ್ಟಿ ಗ್ರಾಮಗಳನ್ನು ಸೇರಿಸಿ **ವಿಜಯನಗರ** ಗ್ರಾಮ ಪಂಚಾಯತಿಯನ್ನಾಗಿ ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಕೆಯಾಗಿರುತ್ತವೆ.
(ಇ)	ಯಾವ ಕಾಲಮಿತಿಯಲ್ಲಿ ಹೊಸ ಗ್ರಾಮ ಪಂಚಾಯಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದು;	ಪ್ರಸ್ತುತ 2021 ರ ಜನಗಣತಿ ಕಾರ್ಯ ಮುಕ್ತಾಯವಾಗುವವರೆಗೂ ಯಾವುದೇ ಆಡಳಿತಾತ್ಮಕ ಗಡಿಗಳನ್ನು ಬದಲಾವಣೆ ಮಾಡದಿರಲು ಕೇಂದ್ರ ಜನಗಣತಿ ನಿರ್ದೇಶನಾಲಯವು ಆದೇಶ ಹೊರಡಿಸಿದ್ದು, ಜನಗಣತಿ ಕಾರ್ಯ ಪೂರ್ಣಗೊಂಡ ನಂತರ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ನಿರ್ದೇಶನ ನೀಡಲಾಗಿದೆ.
(ಈ)	ಇಲ್ಲದಿದ್ದಲ್ಲಿ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಗ್ರಾಅಪ 352 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ	
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	287
ಸದಸ್ಯರ ಹೆಸರು:	ಶ್ರೀ ರಾಜೇಗೌಡ ಟಿ.ಡಿ (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ:	20-12-2022
ಉತ್ತರಿಸುವವರು:	ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನ ಸಭಾ ಕ್ಷೇತ್ರದಿಂದ ಸುಮಾರು 150 ಕಿ.ಮೀ. ದೂರದ ಕಡೂರಿನಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಕಚೇರಿ ಇದ್ದು, ಇದರಿಂದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ-4 ರ ಅಧಿಸೂಚಿತ ಪ್ರದೇಶಗಳ ಕ್ಷೇತ್ರ ನಿರ್ಧರಣೆಯನ್ನು ತೆಗೆದುಕೊಳ್ಳಲು ತಾತ್ಕಾಲಿಕ ವ್ಯವಸ್ಥೆಯ ಕ್ರಮವಾಗಿ ಚಿಕ್ಕಮಗಳೂರು ಕಂದಾಯ ಉಪ ವಿಭಾಗ ಕೆಲಸವನ್ನು ನಿರ್ವಹಿಸಲು ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಮಗಳೂರು ಹಾಗೂ ಕಡೂರಿನಲ್ಲಿ ತಲಾ ಒಂದು ಅರಣ್ಯ ವ್ಯವಸ್ಥಾಪನಾಧಿಕಾರಿ ಹುದ್ದೆಯನ್ನು ತಾತ್ಕಾಲಿಕವಾಗಿ 02 ವರ್ಷಗಳ ಅವಧಿಗೆ ಸೃಜಿಸಲಾಗಿದೆ. ಸದರಿ ಹುದ್ದೆಗಳನ್ನು ಕಂದಾಯ ಇಲಾಖೆಯ ಸಹಾಯಕ ಆಯುಕ್ತರು ವೃಂದದ ನಿವೃತ್ತ ಕೆ.ಎ.ಎಸ್ ಅಧಿಕಾರಿಗಳಿಂದ ಭರ್ತಿ ಮಾಡಲು, ಇಲಾಖಾ ಮುಖ್ಯಸ್ಥರು ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ. ಕಡೂರಿನಲ್ಲಿ ಪ್ರಸ್ತುತ ಅರಣ್ಯ ವ್ಯವಸ್ಥಾಪನಾಧಿಕಾರಿ ಹುದ್ದೆ ಭರ್ತಿಯಾಗಿ ಅಧಿಕಾರಿಯು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಚಿಕ್ಕಮಗಳೂರಿನ ಅರಣ್ಯ ವ್ಯವಸ್ಥಾಪನಾಧಿಕಾರಿ ಹುದ್ದೆಗೆ ಯಾವುದೇ ಅರ್ಹ ಅಧಿಕಾರಿಗಳು ಲಭ್ಯವಾಗಿರುವುದಿಲ್ಲ. ಆದ್ದರಿಂದ, ಪ್ರಸ್ತುತ ತಾತ್ಕಾಲಿಕವಾಗಿ ಕಡೂರಿನಲ್ಲಿರುವ ಅರಣ್ಯ ವ್ಯವಸ್ಥಾಪನಾಧಿಕಾರಿಯು ಚಿಕ್ಕಮಗಳೂರು ವ್ಯಾಪ್ತಿಯ ಅರಣ್ಯ ವ್ಯವಸ್ಥಾಪನಾ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.
ಆ)	ಬಂದಿದ್ದಲ್ಲಿ, ಸೆಕ್ಷನ್-4 ರ ಅಧಿಸೂಚಿತ ಪ್ರಕರಣಗಳು ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿರುವುದರಿಂದ ಕೊಪ್ಪ ತಾಲ್ಲೂಕಿನಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)	ಇಲ್ಲ.
ಇ)	ಕೊಪ್ಪ ತಾಲ್ಲೂಕಿನಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ಕಛೇರಿ ಸ್ಥಾಪಿಸಲು ಇರುವ ತೊಂದರೆಗಳೇನು; (ವಿವರ ನೀಡುವುದು)	ಅನ್ವಯಿಸುವುದಿಲ್ಲ.
ಈ)	ಯಾವ ಕಾಲಮಿತಿಯೊಳಗೆ ಇಲ್ಲಿ ಕಛೇರಿ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು?	ಉದ್ಭವಿಸುವುದಿಲ್ಲ

ಕಡತ ಸಂಖ್ಯೆ: ಅಪಜೀ 364 ಅಅಸೇ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

೨.

ಕರ್ನಾಟಕ ವಿಧಾನ ಸಭೆ

14ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **288**

ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)

ಉತ್ತರಿಸಬೇಕಾದ ದಿನಾಂಕ : 20.12.2022

ಉತ್ತರಿಸುವವರು : ಸನ್ಮಾನ್ಯ ಮುಖ್ಯ ಮಂತ್ರಿಗಳು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನ ಸಭಾ ಕ್ಷೇತ್ರವ್ಯಾಪ್ತಿಯ ಜನವಸತಿ ಪ್ರದೇಶಗಳನ್ನು ಸರ್ಕಾರದ ಕಟ್ಟಡಗಳನ್ನು ಹಾಗೂ ರೈತರು ಜೀವನೋಪಯೋಗಕ್ಕಾಗಿ ಸಾಗುವಳಿಮಾಡಿದ ಜಮೀನುಗಳನ್ನು ಅವೈಜ್ಞಾನಿಕವಾಗಿ ಸೆಕ್ಷನ್-4 ರ ಅಧಿಸೂಚಿತ ಅರಣ್ಯ ಎಂದು ಅಧಿಸೂಚನೆ ಹೊರಡಿಸಿರುವ ಬಗ್ಗೆ, ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 74 ಎಫ್‌ಎಫ್ 2006, ದಿನಾಂಕ: 01.02.2007ರಲ್ಲಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯನ್ನು ರಚನೆ ಮಾಡಿ ಅರಣ್ಯ ಮೀಸಲು ಪ್ರದೇಶಗಳನ್ನು ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ಜಂಟಿ ಮೋಜಣಿ ಮಾಡಲು ಆದೇಶಿಸಿದ್ದು, ಅದರನ್ವಯ ಜಂಟಿ ಮೋಜಣಿ ಕಾರ್ಯಕೈಗೊಳ್ಳಲಾಗಿದಿಯೇ; (ವಿವರ ನೀಡುವುದು)	ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಇವರ ಅಧಿಸೂಚನೆ ಸಂಖ್ಯೆ: ಎಫ್‌ಓಆರ್/ಸಿಆರ್-(1-5)/2001-02, ದಿನಾಂಕ: 05.06.2002ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿ ತಾಲ್ಲೂಕುಗಳಲ್ಲಿ ದಟ್ಟ ಅರಣ್ಯದಿಂದ ಕೂಡಿದ 55,303.27 ಹೆಕ್ಟೇರ್ ಪ್ರದೇಶಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಸೆಕ್ಷನ್-71 ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ **"ಅರಣ್ಯ ಮೀಸಲು"** ಪ್ರದೇಶಗಳೆಂದು ಅಧಿಸೂಚನೆ ಹೊರಡಿಸಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 29 ಎಲ್‌ಜಿಯು 2002, ದಿನಾಂಕ:14.03.2005ರಂತೆ **(ಪ್ರತಿ ಒದಗಿಸಿದೆ)** **"ಅರಣ್ಯ ಮೀಸಲು"** ಎಂದು ಘೋಷಿಸಿದ ಒಟ್ಟು ಪ್ರದೇಶದಿಂದ ಅನಧಿಕೃತ ಸಾಗುವಳೀ ಸಕ್ರಮೀಕರಣಕ್ಕಾಗಿ ಒಳಗೊಂಡ ವಿಸ್ತೀರ್ಣ ಸಾಗುವಳಿಚೀಟಿ ನೀಡಲು ಬಾಕಿ ಇರುವ ವಿಸ್ತೀರ್ಣ, ಟಿ.ಟಿ ದಂಡ ವಿಧಿಸಿರುವ ವಿಸ್ತೀರ್ಣದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಯಡಿ ಪರಿಶೀಲನೆಗೆ ಒಳಪಡಿಸಿ ಸಕ್ರಮೀಕರಣಕ್ಕಾಗಿ ಅನುವಾಗಲು 10000.00 ಹೆಕ್ಟೇರ್ ಹೊರತುಪಡಿಸಿ 45000 ಹೆಕ್ಟೇರ್ ಜಮೀನು ಅರಣ್ಯ ಮೀಸಲು ಎಂದು ಘೋಷಿಸಿ ಪರಿಷ್ಕೃತ ಆದೇಶ ಹೊರಡಿಸುವಂತೆ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 74 ಎಫ್‌ಎಫ್ 2006, ದಿನಾಂಕ:01.02.2007ರಲ್ಲಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯನ್ನು ರಚನೆ ಮಾಡಿ ಅರಣ್ಯ ಮೀಸಲು ಪ್ರದೇಶಗಳನ್ನು ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ಜಂಟಿ ಮೋಜಣಿ ಮಾಡಲು ಆದೇಶಿಸಿದ್ದು, ಅದರಂತೆ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯಿಂದ ಜಂಟಿ ಮೋಜಣಿ ಕಾರ್ಯಕೈಗೊಂಡು 165 ಬ್ಲಾಕ್‌ಗಳಿಂದ 29,544.50 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಗುರುತಿಸಲಾಗಿರುತ್ತದೆ. ಚಿಕ್ಕಮಗಳೂರು ಕಾರ್ಯಯೋಜನಾ ಘಟಕದಿಂದ ಕರ್ನಾಟಕ ಅರಣ್ಯ ಕಾಯ್ದೆ-1963 ರ ಸೆಕ್ಷನ್-4 ರಡಿ ಕರಡು ನಕಾಶೆ ಮತ್ತು ಅಧಿಸೂಚನೆಯ ಪ್ರಸ್ತಾವನೆಗಳನ್ನು ತಯಾರಿಸಿ ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ ಟಾಸ್ಕ್ ಫೋರ್ಸ್ ಸಮಿತಿಗಳಿಂದ ಅನುಮೋದನೆ ಪಡೆದು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದಿಂದ 161 ಬ್ಲಾಕ್‌ಗಳಿಂದ 28,890.25 ಹೆಕ್ಟೇರ್ ಪ್ರದೇಶಗಳನ್ನು ಕರ್ನಾಟಕ ಅರಣ್ಯ ಕಾಯ್ದೆ-1963 ರ ಕಲಂ-4 ರಡಿ ಮೀಸಲು ಅರಣ್ಯವೆಂದು ಅಧಿಸೂಚನೆಗೊಂಡಿರುತ್ತದೆ.

2...

ಆ)	ಜಂಟಿ ಮೋಜಣಿಯನ್ನು ಸ್ಥಳಕ್ಕೆ ಹೋಗಿ ಮಾಡದೇ ಕೇವಲ ಕಚೇರಿಯಲ್ಲೇ ಕುಳಿತು ಲೋಪದ ನಕ್ಷೆ ತಯಾರಿಸಿ ಜನವಸತಿ ಪ್ರದೇಶಗಳನ್ನು ಹಾಗೂ ಸರ್ಕಾರದ ಕಟ್ಟಡಗಳನ್ನು, ರೈತರು ಜೀವನೋಪಾಯಕ್ಕಾಗಿ ಸಾಗುವಳಿ ಮಾಡಿದ ಜಮೀನುಗಳನ್ನು ಸೆಕ್ಷನ್-4 ಗೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್-71 ರಡಿ ಜಿಲ್ಲಾಧಿಕಾರಿಗಳಿಂದ ಅಧಿಸೂಚನೆಗೊಂಡ **"ಅರಣ್ಯ ಮೀಸಲು"** ಪ್ರದೇಶಗಳನ್ನು ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಗೆ ಜಂಟಿಯಾಗಿ ಸ್ಥಳಪರಿಶೀಲನೆ ಮಾಡಿದ ನಂತರವೇ ನಕಾಶೆ ತಯಾರಿಸಲಾಗಿರುತ್ತದೆ.
ಇ)	ಈಗಾಗಲೇ ಮಾಡಿರುವ ಜಂಟಿ ಮೋಜಣಿಯ ವರದಿಯನ್ನು ಪರಿಗಣಿಸದೇ ಮರು ಜಂಟಿ ಮೋಜಣಿ ಕಾರ್ಯಕೈಗೊಳ್ಳಲು ಸರ್ಕಾರ ಬದ್ಧವಿದೆಯೇ; ಇದಲ್ಲಿ, ಯಾವಾಗ ಕೈಗೊಳ್ಳಲಾಗುತ್ತದೆ; (ವಿವರ ನೀಡುವುದು)	ಸರ್ಕಾರದ ಹಂತದಲ್ಲಿ ಈ ಕುರಿತು ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಸಂಖ್ಯೆ: ಅಪಜೀ 184 ಎಫ್ ಎ ಎಫ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿಕ್ಕಮಗಳೂರು ಜಿಲ್ಲೆ, ಕೊಪ್ಪ, ಶೃಂಗೇರಿ, ನ.ರಾ.ಪುರ ಹಾಗೂ ಮೂಡಿಗೆರೆ ತಾಲ್ಲೂಕುಗಳ ಸರ್ಕಾರಿ ಜಮೀನುಗಳನ್ನು ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 71ನ್ನು ಆಹ್ವಾನಿಸಿ ಅರಣ್ಯ ಮೀಸಲು ಎಂದು ಘೋಷಿಸಿರುವ ಬಗ್ಗೆ.

ಓದಲಾಗಿದೆ: i) ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ಇವರು ಹೊರಡಿಸಿದ ಐದು ಅಧಿಸೂಚನೆಗಳ ಸಂಖ್ಯೆ:
1. ಎಫ್‌ಓಆರ್(1)-ಕೊಪ್ಪ, 2001-02
2. ಎಫ್‌ಓಆರ್(2)-ಶೃಂಗೇರಿ 2001-02,
3. ಎಫ್‌ಓಆರ್(3)-ನ.ರಾ.ಪುರ-2001-02
4. ಎಫ್‌ಓಆರ್(4)-ಚಿಕ್ಕಮಗಳೂರು 2001-02,
5. ಎಫ್‌ಓಆರ್(5)-ಮೂಡಿಗೆರೆ, 2001-02

ದಿನಾಂಕ **5-6-2002.**

4 3 MAR 2005

12204

ii) ಸರ್ಕಾರಿ ಆದೇಶ ಸಂಖ್ಯೆ: ಕಂಇ 29 ಎಲ್‌ಜಿಯು 2002 ದಿನಾಂಕ **3-7-2002.**

iii) ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರ ಪತ್ರದ ಸಂಖ್ಯೆ: ಎಂ 4 ಎಲ್‌ಎನ್ ಡಿ :ಸಿಆರ್ :174 :2002-03 ದಿನಾಂಕ **24-8-2002.**

iv) ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರ ಪತ್ರದ ಸಂಖ್ಯೆ:ಎಂ 4 : ಎಲ್ ಎನ್ ಡಿ : ಸಿ ಆರ್ :174 :2002-03 ದಿನಾಂಕ **30-9-2002.**

v) ಸರ್ಕಾರಿ ಆದೇಶ ಸಂಖ್ಯೆ: ಕಂಇ 29 ಎಲ್ ಜಿ ಯು 2002ರ ದಿನಾಂಕ **22-10-2002.**

vi) ಸರ್ಕಾರಿ ಪತ್ರದ ಸಂಖ್ಯೆ:ಆರ್ ಡಿ 29 ಎಲ್ ಜಿ ಯು 02 ದಿನಾಂಕ **13-2-2003.**

vii) ಸರ್ಕಾರಿ ಪತ್ರದ ಸಂಖ್ಯೆ:ಆರ್ ಡಿ 29 ಎಲ್ ಜಿ ಯು 02 ದಿನಾಂಕ **17-10-2002.**

ಪ್ರಸ್ತಾವನೆ:

ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರು ಓದಲಾಗಿದೆ (i) ರ ದಿನಾಂಕ **5-6-2002**ರಂದು ಒಟ್ಟು 5 ಅಧಿಸೂಚನೆಗಳನ್ನು ಹೊರಡಿಸಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 71ನ್ನು ಆಹ್ವಾನಿಸಿ ದೊಡ್ಡ ಪ್ರಮಾಣದ ವಿಸ್ತೀರ್ಣದ ಕಂದಾಯ ಜಮೀನನ್ನು ಅರಣ್ಯ ಮೀಸಲು ಎಂದು ಘೋಷಿಸಿದ್ದಾರೆ. ಈ 5 ಅಧಿಸೂಚನೆಗಳಲ್ಲಿ **1) ಚಿಕ್ಕಮಗಳೂರು, 2) ಮೂಡಿಗೆರೆ, 3) ಶೃಂಗೇರಿ,4) ನ.ರಾ.ಪುರ, 5) ಕೊಪ್ಪ ತಾಲ್ಲೂಕಿನ ಕೊಪ್ಪ** ಅರಣ್ಯ ವಿಭಾಗದಲ್ಲಿ ಒಳಪಡುವ ಜಮೀನಾಗಿರುತ್ತವೆ. ಅರಣ್ಯ ಮೀಸಲು ಎಂದು ಘೋಷಿಸಿರುವ ಒಟ್ಟು 5 ಅಧಿಸೂಚನೆಗಳಲ್ಲಿನ ಒಟ್ಟು ವಿಸ್ತೀರ್ಣ 1,38,258.19 ಎಕರೆ (55,303.27 ಹೆಕ್ಟೇರ್) ಇರುತ್ತದೆ.

2. ಈ ಕೆಳಕಂಡ ಕಾರಣಗಳಿಗಾಗಿ ಐದು ಅಧಿಸೂಚನೆಗಳಲ್ಲಿನ ಜಮೀನು ಅರಣ್ಯ ಮೀಸಲು ಎಂದು ಘೋಷಿಸಲಾಗಿದೆ.

1) ಸೊಪ್ಪಿನಬೆಟ್ಟ, ಕಾಫಿ ಖರಾಬು ಇತ್ಯಾದಿ ಬಹಳಷ್ಟು ವಿಸ್ತಾರ ಸರ್ಕಾರಿ ಭೂಮಿ ಇದ್ದು ನಿತ್ಯ ಹರಿದ್ವರ್ಣ ಅರೆ ನಿತ್ಯ ಹರಿದ್ವರ್ಣ ಮಾದರಿ ದಟ್ಟ ಅರಣ್ಯ ಬೆಳೆದಿರುವ ಮಲೆನಾಡು ಪ್ರದೇಶವಾಗಿದೆ. ಇಳಿಜಾರು ಬೆಟ್ಟದಿಂದ ಹಾಗೂ ದಟ್ಟ ಅರಣ್ಯದಿಂದ ಕೂಡಿದ ಪ್ರದೇಶವಾಗಿದೆ ಹಾಗೂ ಜೀವ ನದಿಯಾದ ತುಂಗ ಹಾಗೂ ಉಪನದಿಗಳು ಹರಿಯುತ್ತಿವೆ. ಸದರಿ ನದಿಯ ಪಾತ್ರ ಪ್ರದೇಶ ಹಾಗೂ ಪರಿಸರ ಕಾಪಾಡುವ ಮತ್ತು ಜಿಲ್ಲೆಯಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಹಿತದೃಷ್ಟಿಯಿಂದ ಅಮೂಲ್ಯವಾದ ಭೂ ಪ್ರದೇಶದಲ್ಲಿನ ಅಕ್ರಮ ಕಡಿತಲೆ ಭೂಮಂಜೂರಾತಿ ಹಾಗೂ ಅಕ್ರಮ ಸಾಗುವಳಿ ಪ್ರಯತ್ನಗಳು ತಡೆಗಟ್ಟಬೇಕಾದ ಅವಶ್ಯಕತೆ ಇದೆ.

2) ಈ ಪ್ರದೇಶದ ವ್ಯಾಪ್ತಿಯ ಬಹಳಷ್ಟು ವಿಸ್ತಾರವನ್ನು ಕರ್ನಾಟಕ ಅರಣ್ಯ ಕಾಯಿದೆ ಕಲಂ 4ರ ಅಡಿ ಮೀಸಲು ಅರಣ್ಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿರುವ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಈ ಸಂಬಂಧ ನಿಯಮಾನುಸಾರ ಎಲ್ಲಾ ಪ್ರಕ್ರಿಯೇಗಳನ್ನು ನಡವಳಿಗಳನ್ನು ಪೂರೈಸಿ ಅಂತಿಮವಾಗಿ ಕರ್ನಾಟಕ ಅರಣ್ಯ ಕಾಯಿದೆ ಕಲಂ 17ರ ಅಡಿ ಅಧಿಸೂಚನೆಯನ್ನು ಹೊರಡಿಸಲು, ಸರ್ಕಾರಕ್ಕೆ ಇನ್ನೂ ಹೆಚ್ಚಿನ ಕಾಲಾವಕಾಶ ಬೇಕಾಗಬಹುದು.

3) ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ(ಸಿವಿಲ್) 202/95ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದವರು ದಿನಾಂಕ 12-12-96ರಂದು ನೀಡಿರುವ ಮಧ್ಯಂತರ ತೀರ್ಪಿನಂತೆ ಮರಗಳಿಂದ ಕೂಡಿದ ಎಲ್ಲಾ ಪ್ರದೇಶವನ್ನು ಅರಣ್ಯ ಎಂದು ಪರಿಗಣಿಸಬೇಕಾಗಿರುತ್ತದೆ ಹಾಗೂ ಅಂತಹ ಪ್ರದೇಶವನ್ನು ರಕ್ಷಿಸಬೇಕಾಗುತ್ತದೆ.

4) ಈ ಹಿಂದೆ C ಮತ್ತು D ವರ್ಗದ ಜಮೀನುಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದು ನಂತರ ಸಾಗುವಳಿಯಲ್ಲಿ ಯೋಗ್ಯ ಪ್ರದೇಶವನ್ನು ಮಾತ್ರ ಕಂದಾಯ ಇಲಾಖೆಗೆ ಮರು ವರ್ಗಾಹಿಸಿದೆ. ದಟ್ಟವಾದ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಸರ್ಕಾರದ ನಿರ್ದೇಶನದ ವಿರುದ್ಧ ಮರು ವರ್ಗಾಯಿಸಿರುವುದರಿಂದ ಉದ್ಭವವಾಗಿರುವ ಗೊಂದಲವನ್ನು ನಿವಾರಿಸಲು ಭೂದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕಾದ ಅಗತ್ಯತೆ ಇರುತ್ತದೆ.

3. ಈ ಸಂದರ್ಭಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 71ರ ಅಡಿ ಪ್ರದತ್ತವಾದ ಅಧಿಕಾರದ ಮೇರೆಗೆ ಸದರಿ ಜಮೀನು ಅರಣ್ಯ ಮೀಸಲು ಪ್ರದೇಶ ಎಂದು ಘೋಷಿಸಲಾಗಿದೆ. ಅರಣ್ಯ ಮೀಸಲು ಪ್ರದೇಶದ ಸಂರಕ್ಷಣೆ ಮತ್ತು ನಿರ್ವಹಣೆಯನ್ನು ಅರಣ್ಯ ಇಲಾಖೆಯೇ ಮುಂದುವರೆಸಿಕೊಂಡು ಹೋಗಲು

ಅಧಿಸೂಚನೆಯಲ್ಲಿ ತಿಳಿಸಲ್ಪಾಗಿದೆ. ಗೋಮಾಳ ಪ್ರದೇಶದಲ್ಲಿನ ಜಾನುವಾರುಗಳ ಮೇಯುವಿಕೆ ಹಾಗೂ ಸೊಪ್ಪಿನ ಬೆಟ್ಟ ಪ್ರದೇಶದಲ್ಲಿ ಸ್ವಂತ ಉಪಯೋಗಕ್ಕಾಗಿ ಎಲೆ ಸಂಗ್ರಹಣೆ ಹಕ್ಕನ್ನು ರಕ್ಷಿಸಲಾಗಿದೆ ಎಂದು ತಿಳಿಸಲಾಗಿದೆ.

4. ಹಿಂದಿನ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಮೋಟಮ್ಮ ಇವರು ದಿನಾಂಕ 14-6-2002ರಂದು ಹಿಂದಿನ ಮಾನ್ಯ ಕಂದಾಯ ಸಚಿವರಿಗೆ ಪತ್ರ ಬರೆದಿದ್ದು ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಸದರಿ ಪತ್ರದಲ್ಲಿ ಈ ಅಧಿಸೂಚನೆಗಳ ಮೂಲಕ ``ಅರಣ್ಯ ಮೀಸಲು`` ಎಂದು ಘೋಷಿಸಿರುವ ಕಾರಣ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಕರ್ನಾಟಕ ಅರಣ್ಯ ಕಾಯಿದೆ ಕಲಂ 4ರ ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಕರ್ನಾಟಕ ಅರಣ್ಯ ಕಾಯಿದೆ ಕಲಂ 17ರ ಅಡಿ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಈ ಪ್ರದೇಶವನ್ನು ಮೀಸಲು ಅರಣ್ಯ ಎಂದು ಘೋಷಿಸಬಹುದಾಗಿತ್ತು. ಆದರೆ ಜಿಲ್ಲಾಧಿಕಾರಿಗಳು ಹೀಗೆ ಮಾಡಿರುವುದಿಲ್ಲ ಎಂದು ಹೇಳಿರುವರು. ಅರಣ್ಯ ಮೀಸಲು ಘೋಷಿತ ಪ್ರದೇಶದಲ್ಲಿ ಹರಿಜನ ಮತ್ತು ಗಿರಿ ಜನರು ಫಾರಂ ನಂ.1ರ ಪ್ರಕಾರ ಹಕ್ಕು ಪತ್ರ ಪಡೆದು ಮನೆಗಳನ್ನು ಕಟ್ಟಿಕೊಂಡಿದ್ದು ವಾಸಿಸುತ್ತಿದ್ದಾರೆ. ಫಾರಂ ನಂ. 53ರಲ್ಲಿ ಅನೇಕರಿಗೆ ಜಮೀನು ಮಂಜೂರಾಗಿದ್ದು, ಅದರ ಕಿಮ್ಮತ್ತನ್ನು ಸರ್ಕಾರಕ್ಕೆ ತುಂಬಿ ಸಾಗುವಳಿ ಚೀಟಿಯನ್ನು ಪಡೆದಿರುತ್ತಾರೆ ಎಂದು ದೃಢೀಕರಿಸಿರುವರು. ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಈ ಪ್ರದೇಶದಲ್ಲಿ ಗ್ರಾಮಪಂಚಾಯತಿ ಹೊಸ ಕಟ್ಟಡಗಳು, ಸಮುದಾಯ ಭವನ, ಪಾಠಶಾಲೆಗಳು, ಕುಡಿಯುವ ನೀರಿನ ಕೊಳವೆ ಭಾವಿಗಳು ಹಾಗೂ ಬಸ್ಸು ನಿಲ್ದಾಣಗಳು ಕಟ್ಟಿರುವರು. ಇನ್ನು ಕೆಲವರಿಗೆ ಖಾಯಂ ಸಾಗುವಳಿ ಚೀಟಿ ನೀಡಲು ಸರ್ಕಾರದ ಆದೇಶವಾಗಿರುವುದು ವಾಸ್ತವಿಕ ವಿಷಯವಾಗಿದೆ. ಈ ಎಲ್ಲಾ ಅಂಶಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅರಿವು ಇದ್ದರೂ ಗಣನೆಗೆ ತೆಗೆದುಕೊಳ್ಳದೇ ಏಕಮುಖವಾಗಿ ಅರಣ್ಯ ಮೀಸಲು ಎಂದು ಆದೇಶ ಹೊರಡಿಸಿರುವರು. ಆದುದರಿಂದ ಮೂಡಿಗೆರೆ ತಾಲ್ಲೂಕಿನ ಕಳಸ ಮತ್ತು ಬಾಳೂರು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಜನರು ಆತಂಕಕ್ಕೆ ಒಳಗಾಗಿ ಘರ್ಷಣೆಗೆ ಕಾರಣವಾಗಿದೆ ಎಂಬುದಾಗಿ ತಿಳಿಸುತ್ತಾ ಜಿಲ್ಲಾಧಿಕಾರಿಗಳ ಆದೇಶವನ್ನು ಕೂಡಲೇ ತಡೆಹಿಡಿದು ತಡೆಯಾಜ್ಞೆಯನ್ನು ಹೊರಡಿಸುವುದು ಅವಶ್ಯಕವಾಗಿರುತ್ತದೆ ಎಂದು ತಿಳಿಸುತ್ತಾ ಕೂಡಲೇ ಕ್ರಮ ಕೈಗೊಳ್ಳಲು ಕೋರಿಕೊಂಡಿರುವರು.

5. ಈ ಕೋರಿಕೆಯನ್ನು ಪರಿಗಣಿಸಿ ಓದಲಾಗಿದೆ (ii)ರ ಸರ್ಕಾರದ ಆದೇಶ ಸಂಖ್ಯೆ: ಅರ್‌ಡಿ 29 ಎಲ್‌ಜಿಯು 2002 ದಿನಾಂಕ 3-7-2002ರಲ್ಲಿ ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರು ಅರಣ್ಯ ಮೀಸಲು ಎಂದು ಹೊರಡಿಸಿರುವ 5 ಅಧಿಸೂಚನೆಗಳಿಗೆ ಈ ಕೂಡಲೇ ಜಾರಿಗೆ ಬರುವಂತೆ ಮೂರು ತಿಂಗಳವರೆಗೆ ತಡೆಹಿಡಿಯಲಾಗಿದೆ. ದಿನಾಂಕ 3-7-2002ರಂದು ಪ್ರತ್ಯೇಕ ಪತ್ರ ಬರೆದು ಈ ಬಗ್ಗೆ ವಿವರವಾದ ಸ್ಪಷ್ಟ ಅಭಿಪ್ರಾಯವನ್ನೊಳಗೊಂಡ ವರದಿಯನ್ನು ತಕ್ಷಣವೇ ಸರ್ಕಾರಕ್ಕೆ ನೀಡುವಂತೆ ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರನ್ನು ಕೋರಲಾಗಿತ್ತು.

6. ಓದಲಾಗಿದೆ (iii) ರ ದಿನಾಂಕ 24-8-2002ರಂದು ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರು ತಮ್ಮ ವರದಿಯಲ್ಲಿ ಅರಣ್ಯ ಮೀಸಲು ಎಂದು ಘೋಷಿಸಿರುವ ಪ್ರದೇಶದಲ್ಲಿ ಈ ಕೆಳಕಂಡಂತೆ ಜಮೀನುಗಳ ವಿವರ ನೀಡಿರುವರು.

	ಎಕರೆ , ಗುಂಟೆ
1. ಅರಣ್ಯ ಮೀಸಲು ಎಂದು ಘೋಷಿಸಿರುವ ಜಮೀನಿನ ಒಟ್ಟು ವಿಸ್ತೀರ್ಣ	- 1,38,258.13
2. ಈ ಪೈಕಿ ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕಾಗಿ ಫಾರಂ, 50 53ರ ಅರ್ಜಿಗಳಿಗೆ ಸಂಬಂಧಿಸಿದಂತೆ ವಿಸ್ತೀರ್ಣ	- 57,718.13
3. ಅನಧಿಕೃತ ಸಾಗುವಳಿಯಲ್ಲಿ ಟ.ಟ.ದಂಡ ವಿಧಿಸಿರುವ ವಿಸ್ತೀರ್ಣ	- 5,675.19
4. ಜಮೀನು ಮಂಜೂರಾಗಿ ಸಾಗುವಳಿ ಚೀಟಿ ನೀಡಲು ಬಾಕಿ ಇರುವ ವಿಸ್ತೀರ್ಣ	- 16,511.36
5. ಅರಣ್ಯಕ್ಕಾಗಿ ಕಲಂ 4ರ ಪ್ರಸ್ತಾವನೆ ಅನುಸರಿಸಿ ದಟ್ಟ ಅರಣ್ಯ ಇತ್ಯಾದಿ ಎಂದು ಆರ್.ಟಿ.ಸಿ.ಯಲ್ಲಿ ನಮೂದಾಗಿರುವ ವಿಸ್ತೀರ್ಣ	- 47,970.35

7. ಓದಲಾಗಿದೆ (iv) ರ ಜಿಲ್ಲಾಧಿಕಾರಿಯವರು ದಿನಾಂಕ **30-9-2002**ರ ವರದಿಯಲ್ಲಿ ಅರಣ್ಯ ಮೀಸಲು ಎಂದು ಘೋಷಿಸಿದ ಪ್ರದೇಶದಲ್ಲಿನ ಗ್ರಾಮಗಳ ಬೆಳವಣಿಗೆಗೆ ಕೆಲವು ಜಮೀನಿನ ಆವಶ್ಯಕತೆ ಇದೆ ಎಂದು ತಿಳಿಸಿದರು. ಆದರೆ, ಎಷ್ಟು ವಿಸ್ತೀರ್ಣದ ಜಮೀನಿನ ಅಗತ್ಯತೆ ಇದೆ ಎಂಬುದನ್ನು ಸ್ಪಷ್ಟಪಡಿಸಿರುವುದಿಲ್ಲ. ಈ ಅರಣ್ಯ ಮೀಸಲಾತಿ ಎಂದು ಘೋಷಿಸಿದ 1,38,258.34 ಎಕರೆಯ ವಿಸ್ತೀರ್ಣದಲ್ಲಿ ಗ್ರಾಮ ಬೆಳವಣಿಗೆಗೆ 13,827.04 ಎಕರೆ ಜಮೀನು ಮತ್ತು ಹಿಂದಿನ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಮನವಿಯಲ್ಲಿ ತಿಳಿಸಿರುವಂತೆ ದಿನಾಂಕ 30-9-2002ರ ಜಿಲ್ಲಾಧಿಕಾರಿಯವರ ವರದಿಯಲ್ಲಿ ಸೂಚಿಸಿದ ವಿವಿಧ ಒತ್ತುವರಿಯಲ್ಲಿನ ವಿಸ್ತೀರ್ಣ 32,688.35 ಎಕರೆ ಜಮೀನನ್ನು ಅರಣ್ಯ ಮೀಸಲಾತಿ ಘೋಷಿತ ಪ್ರದೇಶದಿಂದ ಕೈಬಿಡಲು ನಿರ್ಣಯ ಕೈಗೊಳ್ಳಲಾಯಿತು. ಅದರಂತೆ ಸದರಿ ವಿಸ್ತೀರ್ಣ ಕೈಬಿಟ್ಟು ಪರಿಷ್ಕೃತ ಆದೇಶ ಹೊರಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಈ ಜಮೀನುಗಳಲ್ಲಿನ ಗ್ರಾಮಗಳ ಹಾಗೂ ವಿವಿಧ ಒತ್ತುವರಿಗಳ ಎಲ್ಲೆಗಳನ್ನು ಗುರ್ತಿಸಿ ಅರಣ್ಯ ಜಮೀನುಗಳ ಎಲ್ಲೆಗಳನ್ನು ಸ್ಪಷ್ಟವಾಗಿ ಕಂಡು ಹಿಡಿದು ಆ ಜಮೀನನ್ನು ಅರಣ್ಯ ಇಲಾಖೆಯವರಿಗೆ ವಹಿಸಿಕೊಡಲು ಅನುವಾಗಲು ಅಳತೆ ಕಾರ್ಯ ಕೈಗೊಳ್ಳುವ ಅಗತ್ಯತೆ ಕಂಡು ಬಂದಿತು. ದಿನಾಂಕ 7-10-2002ರಂದು ಮಾನ್ಯ ಹಿಂದಿನ ಕಂದಾಯ ಸಚಿವರು ತಮ್ಮ ಕೊಠಡಿಯಲ್ಲಿ ಹಿಂದಿನ ಕಾನೂನು ಸಚಿವರು ಹಾಗೂ ಹಿಂದಿನ ಅರಣ್ಯ ಸಚಿವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಸಂಪೂರ್ಣ ಅಳತೆ ಕಾರ್ಯಗಳನ್ನು ವಿಶೇಷ ದಳದ ಮೂಲಕ ಕೈಗೊಂಡು ಆರು ತಿಂಗಳ ಅವಧಿಯಲ್ಲಿ ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. ಓದಲಾದ (vii)ರ ಸರ್ಕಾರಿ ಆದೇಶ ಸಂಖ್ಯೆ: ಕಂಇ 29 ಎಲ್‌ಜಿಯು 2002ರ ದಿನಾಂಕ **17-10-2002**ರನ್ವಯ ಸದರಿ ಅವಧಿಯನ್ನು ದಿನಾಂಕ 2-4-2003 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಎಂದು ಪರಿಷ್ಕರಿಸಿ ತಡೆಯಾಜ್ಞೆ ಆದೇಶ ಹೊರಡಿಸಲಾಯಿತು. ಅಕ್ರಮ ಸಾಗುವಳಿ ಸಕ್ರಮೀಕರಣ ಸಮಿತಿಯವರು ಪ್ರಕರಣವನ್ನು ನಿರ್ಣಯಿಸಿ, ಅನುಮತಿಸಲು, ಆದರೆ ಅವುಗಳನ್ನು ಸರ್ಕಾರದ ಆದೇಶ ಆಗುವವರೆಗೆ ತಡೆಹಿಡಿಯುವಂತೆ ಓದಲಾದ (vi)ರ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 29 ಎಲ್‌ಜಿಯು 2002ರ ದಿನಾಂಕ **13-2-2003**ರ ಸರ್ಕಾರಿ ಪತ್ರದಲ್ಲಿ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟೀಕರಣ ನೀಡಲಾಯಿತು.

8) ಅರಣ್ಯ ಜಮೀನುಗಳ ಒತ್ತುವರಿಗೆ ಸಂಬಂಧಿಸಿದಂತೆ ಸಚಿವ ಸಂಪುಟದ ಉಪ ಸಮಿತಿಯು ದಿನಾಂಕ 26-3-2003ರಂದು ಹಲವು ಶಿಫಾರಸ್ಸುಗಳಲ್ಲಿ ಒಂದಾದ ಈ ಕೆಳಕಂಡ ಶಿಫಾರಸ್ಸು ಮಾಡಲಾಗಿದೆ.

" The Deputy Commissioner, Chickmagalur vide a number of notification dated 5-6-2002 had declared about 55,000 hectares of Revenue lands in Chickmagalur District as " forest reserve " under Section 71 of the Land Revenue Act. These notifications were stayed by the Revenue Department for a period of three months. The stay was further extended by another six months. The committee opined that the Revenue should conduct a joint survey of the areas under occupation and Forest Departments in order to exclude these from the 55,000 hectares. In addition, certain areas required for future development needs should also be excluded and the balance areas should be handed over to the Forest Department ",

9) ಜಿಲ್ಲಾಧಿಕಾರಿ ಚಿಕ್ಕಮಗಳೂರು ಇವರು ದಿನಾಂಕ 30-7-2003ರಂದು ಅಂತಿಮ ವರದಿಯನ್ನು ನೀಡಿದ್ದು ಈ ಅಂತಿಮ ವರದಿಯಲ್ಲಿ ನೀಡಿರುವ ಅಂಕಿಅಂಶಗಳಿಗೂ ಮತ್ತು ಈ ಹಿಂದೆ ನೀಡಿರುವ ಅಂಕಿಅಂಶಗಳಿಗೂ ವ್ಯತ್ಯಾಸ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ.	ವಿವರ	24-8-2002 ಎಕರೆ ಗುಂಟೆ	30-9-2002 ಎಕರೆ ಗುಂಟೆ	30-7-2003 ಎಕರೆ ಗುಂಟೆ
1.	ಅನಧಿಕೃತ ಸಾಗುವಳಿಯಲ್ಲಿ ಸಕ್ರಮೀಕರಣಕ್ಕೆ ಬಾಕಿ ಇರುವ ವಿಸ್ತೀರ್ಣ	57,718.13	22,139.26	13,513.02
2.	ಅಕ್ರಮ ಮನೆಗಳನ್ನು ಸಕ್ರಮೀಕರಣಕ್ಕೆ ಒಳಗೊಂಡಿರುವ ವಿಸ್ತೀರ್ಣ	-	588.39	1,016.37
3.	ಸಾಗುವಳಿ ಚೀಟಿ ನೀಡಲು ಬಾಕಿ ಇರುವ ವಿಸ್ತೀರ್ಣ	16,511.36	4,284.31	5,039.34
4.	ಟಿ.ಟಿ.ದಂಡ ವಿಧಿಸಿರುವ ಬಾಬ್ತು ಒಳಗೊಂಡ ಜಮೀನಿನ ವಿಸ್ತೀರ್ಣ	5,675.19	5,675.19	5,220.00
	ಒಟ್ಟು	79,905.28	32,688.35	24,789.33

10) ಮೊದಲಿನ ದಿನಾಂಕ 24-8-2002ರ ಮತ್ತು ದಿನಾಂಕ 30-9-2002ರ ಹಾಗೂ ದಿನಾಂಕ 30-7-2003ರ ಅಂತಿಮ ವರದಿಯಲ್ಲಿ ಸಲ್ಲಿಸಿದ ಅಂಕಿ ಸಂಖ್ಯೆಗಳಲ್ಲಿ ತುಂಬಾ ಅಂತರದ ವ್ಯತ್ಯಾಸ ಇರುವ ಕಾರಣ ಅಂತಿಮ ವರದಿಯಲ್ಲಿನ ಒಟ್ಟಗಿನ ಸಂಖ್ಯೆ 24,789.33 ಎಕರೆ ಅಳತೆ ಮೂಲಕ ದೃಢೀಕರಿಸಲು ಮತ್ತು ಗ್ರಾಮ ವಿಸ್ತರಣೆಗೆ ಸಂಬಂಧಿಸಿದಂತೆ ಅಗತ್ಯ ವಿಸ್ತೀರ್ಣದ ಜಮೀನು ಅರಣ್ಯ ಒತ್ತುವರಿ ಮತ್ತು ಸಂಬಂಧಿತ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವ ಸಂಪುಟ ಉಪ ಸಮಿತಿಯಲ್ಲಿ ನಿರ್ಣಯ ಕೈಗೊಳ್ಳುವ ಷರತ್ತಿಗೆ ಒಳಪಡಿಸಿ ಈ ವಿಸ್ತೀರ್ಣವನ್ನು ಅರಣ್ಯ ಮೀಸಲು ಎಂದು ಘೋಷಿಸಿದ ಒಟ್ಟು ವಿಸ್ತೀರ್ಣದಿಂದ ಕೈಬಿಡಲು ಕಂದಾಯ ಇಲಾಖೆಯು ನಿರ್ಣಯ ಕೈಗೊಳ್ಳಲಾಗಿದೆ. ಕರಡು ಸರ್ಕಾರಿ ಆದೇಶದೊಂದಿಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಿ ಕಳುಹಿಸಲಾಗಿತ್ತು. ಇತರೆ ಅಂಶಗಳನ್ನು ವಿಶ್ಲೇಷಿಸಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 71ರಡಿ ನಿರ್ದಿಷ್ಟ ಸಾರ್ವಜನಿಕ ಉದ್ದೇಶಕ್ಕೆ ಜಮೀನು ಕಾಯ್ದಿರಿಸಲು ಅವರಿಗೆ ಅಧಿಕಾರ ಇರುವುದರಿಂದ ಸದರಿ ಆದೇಶವನ್ನು ಮಾರ್ಪಡಿಸಲು ಸರ್ಕಾರಕ್ಕೆ

ಅಧಿಕಾರವಿಲ್ಲದ ಕಾರಣ ಆಕ್ಷೇಪಿತ ಇಲಾಖೆಯವರು ಜಿಲ್ಲಾಧಿಕಾರಿಗಳು ಹೊರಡಿಸಿದ ದಿನಾಂಕ 5-6-20 ರ ಅಧಿಸೂಚನೆ ಅಡಿ ಹೊರಡಿಸಿದ ಮೂಲ ಆದೇಶ ಮಾರ್ಪಡಿಸಿ ಆದೇಶ ಹೊರಡಿಸುವ ಬದಲಿಗೆ ಜಿಲ್ಲಾಧಿಕಾರಿಗಳು ಹೊರಡಿಸಿರುವ ದಿನಾಂಕ 5-6-2002ರ ಅಧಿಸೂಚನೆಯ ಮೂಲ ಆದೇಶವನ್ನು ಸೂಕ್ತವಾಗಿ ಮಾರ್ಪಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬಹುದು ಎಂದು ಅಭಿಪ್ರಾಯಪಟ್ಟಿರುವರು.

11) ಮಾನ್ಯ ಮುಖ್ಯ ಕಾರ್ಯದರ್ಶಿಯವರು ಸರ್ವೋಚ್ಚ ನ್ಯಾಯಾಲಯಕ್ಕೆ ದಿನಾಂಕ 25-2-2004ರಂದು ಸಲ್ಲಿಸಿರುವ Affidavitನ ಕಂಡಿಕೆ 16 ಮತ್ತು 17ರಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಅಂಶ ಪ್ರಸ್ತಾಪಿಸಲಾಗಿದ್ದುದರ ಹಿನ್ನೆಲೆಯಲ್ಲಿ ಅರಣ್ಯ ಮೀಸಲು ಪ್ರದೇಶದ ಮೇಲ್ಕಂಡ ವಿವಿಧ ಒತ್ತುವರಿ ಕೈಬಿಡುವ ಬಗ್ಗೆ ಸೂಕ್ತ ನಿರ್ದೇಶನವನ್ನು ಜಿಲ್ಲಾಧಿಕಾರಿಯವರಿಗೆ ನೀಡುವ ಬಗ್ಗೆ ಕಡತವನ್ನು ಅವರ ಅನುಮೋದನೆ ಕೋರಿ ಮಂಡಿಸಲಾಗಿ ಮುಖ್ಯ ಕಾರ್ಯದರ್ಶಿಯವರು ಈ ಕೆಳಕಂಡಂತೆ ನಿಲುವನ್ನು ತೆಗೆದುಕೊಂಡಿದ್ದಾರೆ.

> " Principal Secretary may please recall the discussions held in a meeting with Principal Secretary, FEE and PCCF on 5.3.2004 in my chambers. During discussions it was noted that according to Forest Department a major area of this 55,000 hectares of revenue land had the characteristics of a forest. However, approx 10,000 hectares of this land has been under occupation of different persons and requests have been received and records have been built up in several cases for its allotment under Land Grant Rules. A survey has also been done and this approximately 10,000 hectares of land under occupation has been identified.
>
> As on today, this approx 10,000 hectares of land does not have the characteristics of a forest, It will be very difficult to establish that it had the characteristics of forest in 1980. It was therefore suggested that proposals for grant of this 10,000 hectares of land may be examined and dealt with according to the law. Any land out of this 10,000 hectares which does not get allocated for whatever reason, should however be reexamined and could be utilized for rehabilitation of very small encroachers evicted from other areas such as Sargod, Maskali forests.

For the remaining 45,000 hectares of land, it is recommended that forest settlement process should be started. This process of forest settlement may be started by issue of a notification under section 4 of the Forest Act

The above view may be confirmed from both Revenue as well as Forest Departments and thereafter submitted for approval of the Cabinet. Once the Cabinet approves it, a suitable submission can be made to the Supreme Court.``.

12. ಈ ಬಗ್ಗೆ ಅರಣ್ಯ ಇಲಾಖೆಯವರು ತಮ್ಮ ದಿನಾಂಕ 18-5-2004ರ ಅನಧಿಕೃತ ಟಿಪ್ಪಣಿ ಸಂಖ್ಯೆ ಅಪಜೀ 294 ಎಫ್ ಜಿ ಎಲ್ 2003 ರಡಿ ಸಹಮತಿ ನೀಡಿರುವರು.

